ಉಷಾ ಸಾಹಿತ್ಯ ಮಾಲೆ

ಮೈಸೂರು

ಶ್ರೀ ಅಮ್ಮೆಂಬಳ ಶಂಕರನಾರಾಯಣ
ನಾವಡ ಅವರಿಗೆ
ವಿಶ್ವಾಸಪೂರ್ವಕವಾಗಿ
ಶಿವರಾಮ ಕಾರಂತ
೧೨. ೮. ೧೯೭೮

ವಿಜಯದಶಮಿ

(ಕವನ ಸಂಗ್ರಹ)

ಜಿ. ವರದರಾಜರಾವ್
ಕನ್ನಡ ಅಧ್ಯಾಪಕ, ಮಹಾರಾಜಾ ಕಾಲೇಜು, ಮೈಸೂರು

ಉಷಾ ಸಾಹಿತ್ಯ ಮಾಲೆ
ಮೈಸೂರು

ಮೊದಲನೆಯ ಮುದ್ರಣ : ೧೯೫೭

ಬೆಲೆ : ಒಂದು ರೂಪಾಯಿ

ಮುದ್ರಕರು, ಪ್ರಕಾಶಕರು
ಆರ್. ಎನ್. ಹಬ್ಬು
ಉಷಾ ಪ್ರೆಸ್, ಓಲ್ಡ್ ಪೋಸ್ಟ್ ಆಫೀಸ್ ರೋಡ್, ಮೈಸೂರು

ಮುನ್ನುಡಿ

ಕಳೆದ ನಾಲ್ವತ್ತು ವರ್ಷಗಳಲ್ಲಿ ಹೊಸ ಕಾವ್ಯವು ಸಮೃದ್ಧವಾಗಿ ವಿವಿಧ ವಾಗಿ ಹೊರಪಟ್ಟಿದೆ. ಹಿಂದೆ ಸಾವಿರಾರು ವರ್ಷಗಳ ಚರಿತ್ರೆಯಲ್ಲಿ ಕಾಣ ದೊರೆಯದ ವೈವಿಧ್ಯವು ಇಂದು ಕಂಡುಬಂದಿದೆ, ಇನ್ನೂ ಕಾಣಬರುವಂತಿದೆ. 'ನೂರು ಮರ, ನೂರು ಸ್ವರ' ಎಂದು 'ವಸಂತಮುಖ'ದಲ್ಲಿ ಉಸುರಿದ ಕವಿ ವಾಣಿ ಹೊಸ ಕಾವ್ಯಮಂದಿರದ ಮೇಲೆ ಕೊರೆದಿಡತಕ್ಕ ತಲೆಬರೆಹದಂತಿದೆ. ಈ ವೈವಿಧ್ಯಕ್ಕೆ ಪ್ರೇರಕಶಕ್ತಿಯಾಗಿ ಒಂದೇ ವಿಶಾಲದರ್ಶನವಿದೆ, ರಾಷ್ಟ್ರೀಯ ಪ್ರಜ್ಞೆಯಿದೆ, ಸ್ವಾತಂತ್ರ್ಯ ದೃಷ್ಟಿಯಿದೆ. ಇದರಿಂದ ವೈವಿಧ್ಯವು ವೈಚಿತ್ರ್ಯ ವಾಗಿಲ್ಲ. ಅದು ಅಪಸ್ವರಮಾಲಿಕೆಯಾಗಿಲ್ಲ, ವೃಂದಗಾಯನದ ಚೆಂದವಾಗಿದೆ. ಬೇರೆ ಬೇರೆ ಪರಿಸರಗಳಲ್ಲಿ ಹುಟ್ಟಿ ಬೆಳೆದು ಸ್ವಂತ ವ್ಯಕ್ತಿತ್ವವನ್ನು ಬೆಳೆಸಿಕೊಂಡ ಕವಿಗಳು ಅನ್ಯಪ್ರಭಾವಗಳಿಗೆ ಒಳಗಾಗಿಯೂ ತಮ್ಮತನವನ್ನು ಒಟ್ಟಿನಲ್ಲಿ ಕಾಯ್ದುಕೊಂಡಿದ್ದಾರೆ. ಪ್ರತಿಯೊಬ್ಬ ಕವಿ 'ನಹಿಪ್ರತಿ' ಎಂಬ ತನ್ನ ರಸಾನು ಭವವನ್ನೂ ದರ್ಶನವನ್ನೂ ತನ್ನ ಕೃತಿಯಲ್ಲಿ ಎರಕಹೊಯ್ಯಲು ಹವಣಿಸು ತ್ತಾನೆ. ಅವನು ಈ ಶತಮಾನದ ನೋವು–ನಲಿವುಗಳಲ್ಲಿ ಮುಳುಗಿ ಏಳುವುದರಲ್ಲಿ ಇತರ ಕವಿಗಳಂತೆ ಇರುವನು ಎಂದು ತೋರುವುದರ ಜೊತೆಗೆ ಅವನದೇ ಆದ ಅಭಿವ್ಯಕ್ತಿಯೂ ಪ್ರತೀತವಾಗುತ್ತದೆ.

ನನ್ನ ಮಿತ್ರರಾದ ಶ್ರೀ. ವರದರಾಜರಾಯರು ಕನ್ನಡಕಾವ್ಯದ ಹಬ್ಬದಲ್ಲಿ ತಮ್ಮ ಈ 'ವಿಜಯದಶಮಿ'ಯ ಆರತಿ ಬೆಳಗಿದ್ದಾರೆ. ಇದರಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಮತ್ತು ಮನಃಸ್ಥಿತಿಗಳಲ್ಲಿ ಬರೆದ ಕವನಗಳಿದ್ದರೂ ಅವುಗಳ ಹಿಂದೆ ಒಂದು ಬೆಳೆಯುತ್ತಿರುವ ವ್ಯಕ್ತಿತ್ವದ ಪ್ರೇರಣೆಯಿದೆ. ನಾಡಿನಲ್ಲಿಯ ದುಃಖದ ಘಟನೆಗಳಿಂದ ಅದು ನೋಯುತ್ತದೆ, ಸಂತೋಷದ ಸಂಗತಿಗಳಿಂದ ಉಬ್ಬುತ್ತದೆ. ರಾಷ್ಟ್ರಪ್ರೇಮ, ಕನ್ನಡಹೆಮ್ಮೆ ಇವು ಅದರಲ್ಲಿ ಸ್ಥಾಯಿಯಾಗಿರು ತ್ತವೆ. ಅದು ನಿರಾಶೆಯ ನಿಟ್ಟುಸಿರನ್ನು ಗಾಳಿಯಲ್ಲಿ ತೇಲಿಬಿಟ್ಟರೂ ವಿಡಂಬ ನೆಯ ಚಾಟಿಯನ್ನು ಬೀಸಿದರೂ ವಿಧಾಯಕವಾದ, ಆಶಾವಾದಿಯಾದ ಮನೋ ವೃತ್ತಿಯೇ ಅದಕ್ಕೆ ಹೆಚ್ಚು ಪ್ರಿಯವಾದದ್ದು. ಹೊಸ ಕವಿಗಳಲ್ಲಿ ಇಂಥ ವ್ಯಕ್ತಿತ್ವವನ್ನು ಪಡೆದಿರುವ, ಇಲ್ಲವೆ ಪಡೆಯುತ್ತಿರುವವರ ವರ್ಗದಲ್ಲಿ ಶ್ರೀ. ವರದ ರಾಜರಾಯರು ಒಬ್ಬರಾಗಿದ್ದಾರೆ. ಈ ಸಂಗ್ರಹದಲ್ಲಿ 'ಪಟ್ಟಣ, ಮಲ್ಲಶಾಲೆ, ಜಡತನ, ದುರಂತ, ಬಂದಿ' ಈ ಬಗೆಯ ಕವನಗಳು ಇಂದಿನ ಬಾಳು ಕಂಡು

ನನ್ನ ಈ ಕವನಗಳನ್ನು ಆಗಿಂದಾಗ್ಗೆ ಪ್ರಕಟಿಸಿ ಉತ್ತೇಜನವಿತ್ತ ಆಯಾ ಪತ್ರಿಕೆಗಳ ಸಂಪಾದಕರಿಗೂ, ಈಗ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿರುವ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ರಾ. ನಾ. ಹಬ್ಬು ಅವರಿಗೂ ನಾನು ಕೃತಜ್ಞನಾಗಿದ್ದೇನೆ.

ಮೈಸೂರು
೮_೮_೧೯೫೭

ಜಿ. ವರದರಾಜರಾವ್

ಒಳಪಿಡಿ

ಸಮರ್ಪಣೆ

ನನ್ನನ್ನು

ಸಾಕಿ ಸಲಹಿದ

ಸೋದರಮಾವನಿಗೆ

ವಿಜಯದಶಮಿ

೧

ಕನ್ನಡ ನಾಡಿನ ಚಿನ್ನದ ಹಬ್ಬದ
ಶತಶತಮಾನದ ಕಥೆಯಿದು ಕೇಳು !
ನೆನೆದರೆ, ಮೈಮರೆಯುವುದೀ ಬಾಳು !
ತುಂಗಭದ್ರೆಯಾ ತೀರದಿ ಬೆಳಗಿದ
ನವರಾತ್ರಿಯ ವೈಭವವಿದು ಬಂಧು
ನೆನೆದರೆ, ಹರಿವುದು ದುಃಖದ ಸಿಂಧು !

೨

ಆಲಿಸದೊ ಅತ್ತ ! ದೇಗುಲದ ಘಂಟಾರವಂ !
ಮಂಗಳಾರತಿಯ ವಾದ್ಯದನಿ, ಭೇರಿಯ ರವಂ !
ಹಂಪೆಯ ವಿರೂಪಾಕ್ಷನಾಲಯದ ಉದ್ಘೋಷಂ !
ಅಲೆ ಅಲೆಯು ಹೊಯ್ಲಿನಲಿ ಕೇಳಿಬಹ ಆವೇಶಂ !
ದಿಗ್ದಿಗಂತಗಳ ದಂತಿಗಳ ತಲೆದೂಗಿಸುತ
ಮಂಗಳಮುಹೂರ್ತವನು ಜನತತಿಗೆ ತಿಳುಹಿಸುತ
ಗುಡಿಗೋಪುರಂಗಳನು ದಾಟಿ ಬರುತಿಹುದು
ಭಕ್ತರುತ್ಸಾಹವನು ಉತ್ತೇಜಗೊಳಿಸಿಹುದು
ರಾಯನರಮನೆ ಮುಂದೆ ನಿಂದ ಜನಸಂದಣಿಯೆ
ದಿವ್ಯದನಿಗೇಳ್ದು ಕೊಂಡಾಡುತಲಿ ಮನದಣಿಯೆ
ಜಯ ಜಯತು ಜಯವೆಂಬ ಜಯಘೋಷ ಚಿಮ್ಮಿಹುದು
ಗಿರಿ, ವಿಪಿನ, ಭೂ, ವ್ಯೋಮಗಳ ತುಂಬಿ ತುಳುಕಿಹುದು !

೩

ಕೃಷ್ಣದೇವರಾಯಗಾಗಿ
   ಅಣಿಯಗೈದ ಮದಕರಿ
ರಾಯನಿರವ ಬರವಿಗಾಗಿ
   ಕಾಯುತಿರುವುದೇ ಪರಿ!
ರತ್ನಖಚಿತ ಅಂಬಾರಿ
   ಅತ್ತ ಇತ್ತ ವೀರರು!
ಬಿರುದು, ಭಲ್ಲೆ, ಕೈಕಠಾರಿ
   ಖಡ್ಗ ಹೊತ್ತ ಧೀರರು!
ಸುತ್ತಮುತ್ತ ಸಾಲು ಸಾಲು
   ವರಾಹ ಮೆರೆವ ಬಾವುಟ!
ವಿವಿಧ ವಾದ್ಯಗೈವ ಹೊಯ್ಲು
   ತುಮುಲದೊಂದು ಆರ್ಭಟ!
ಅದಗೊ ಬಂದ! ಅದಗೊ ಬಂದ!
   ಕೃಷ್ಣದೇವರಾಯನು!
ಇಂದ್ರನಂದ! ಮದನ ಚೆಂದ!
   ತುಂಬು ಚೆಲುವ ಕಾಯನು!
ಕೆಂಪು ತಿಲಕ, ಮುತ್ತಿನೋಲೆ,
   ಚಿನ್ನಕಡಗ, ಉಂಗುರ!
ಥಳಿಪ ಕವಚ, ರತ್ನಮಾಲೆ
   ದಿವ್ಯ ಚೀನಾಂಬರ!
ಪುಷ್ಪವೃಷ್ಟಿ ಸುರಿಸಿದಂತೆ
   ಹರ್ಷಬಾಷ್ಪವುರುಳಿತು.
ದಿವ್ಯ ಮೊಳಗು ಮೊಳಗಿದಂತೆ
   ಚಪ್ಪಾಳೆ ಸುರಿಯಿತು.
ಜಲತರಂಗ ಉರುಳಿದಂತೆ
   ಜನದ ಗುಂಪು ನಡೆದಿದೆ.

ಬರೆದು ಕೊರೆದ ಚಿತ್ರದಂತೆ
ನಾಡ ಮಂದಿ ಎಸೆದಿದೆ.

೪

ಗಂಭೀರ ಗಜಗಮನ ಜನಮನವ ಬಲು ಸೆಳೆದು
ಹೊರಟಿತದೊ ಮೆರೆವಣಿಗೆ ರಾಜಬೀದಿಗೆ ಸುಳಿದು.
ಹೆಜ್ಜೆಹೆಜ್ಜೆಗು ನಿಂತ ಪರದ ವೃಂದದ ಚೆಂದ
ಮುತ್ತುಮಾಣಿಕ ನೀಡಿ ಬೀರುವರು ಆನಂದ!
ರಾಣಿವಾಸದ ಮುಂದೆ ಬಳಿಹಾಯ್ದು ಬರುತಿರಲು
ಉಪ್ಪರಿಗೆ ಕಿಟಕಿ ಬಳಿ ಕಿಕ್ಕಿರಿದು ತುಂಬಿರಲು
ನಗೆ ಸೂಸಿ ಬಗೆ ಸೂಸಿ ಬೊಗಸೆಗಂಗಳ ಹಿಂಡು
ಕೃಷ್ಣರಾಯನ ಮೆಚ್ಚುಗೆಯ ನಲ್ಲೆಯರ ದಂಡು
ಅಂಬಾರಿಯೆಡೆಯಿಂದ ಕುಡಿನೋಟ ಚಿಮ್ಮಿಸುತ
ರಾಯ ತಲೆದೂಗಿಹನು ಕಂಗಳಲೆ ನುಡಿಯಿಸುತ
ಹಸ್ತ್ಯಶ್ವರಥಪದಾತಿಗಳ ಬಹುಪಂಕ್ತಿಯಲಿ
ಹೇಮಕೂಟದ ಬೀದಿಬೀದಿಗಳ ಬಳಸುತಲಿ
ಸಾಗುತಿದೆ ಮೆರೆವಣಿಗೆ ಜನದ ಉದ್ಘೋಷದಲಿ
ವಿಜಯದಶಮಿಯ ಹಬ್ಬದಾವೇಶ ರಭಸದಲಿ.
ಕೆತ್ತನೆಯ ಕೆಲಸದಲಿ ಚಿತ್ತವನು ಸೆಳೆದಿರುವ
ರಾಮದೇವರ ಗುಡಿಯ ಮುಂಗಡೆಯೆ ಸಮೆದಿರುವ
ಮಂಟಪದ ಚೆಲುವೆಂತು! ಕಟ್ಟಿದನೊ ಎನೆ ಕಂತು!
ಹೊಂಬಾಳೆ ಗೊನೆಬಾಳೆ ಕಂಬಗಳ ನಿಲುವೆಂತು!
ಝುಲ್ಲರಿ, ಪತಾಕೆಗಳು, ಮಾವಿನೆಲೆ ತೋರಣದಿ
ಕಂಡಕಂಡವರ ಕಣ್ ಸೆಳೆದಿಹುದು ಓರಣದಿ.
ಮೆರೆವಣಿಗೆ ಮಂಟಪದ ಮಧ್ಯಭಾಗದಿ ನಿಂದು
ಗುಡಿಯ ಮಂಗಳಾರತಿ ಕೊಂಡು ನಡೆದಿದೆ ಮುಂದು.
ದೇಶದೇಶದ ಮಂದಿ ಇಕ್ಕೆಲದಿ ನಿಂದಿರಲು

ಮೆರೆವಣಿಗೆ ಕಂಡೊಡನೆ ಕೈಮುಗಿದು ನಗುತಿರಲು
ರಾಯ ಬಿಡುವಿಲ್ಲದೊಲು ವಂದನೆಯ ಮಾಡುವನು
ದಿಟ್ಟ ಮುಟ್ಟುವವರಿಗೆ ನಗೆನೋಟ ಬೀರುವನು!
ಬಳಸುದಾರಿಯಲಿ ಬಲುಸೊಗಸನೆಲ್ಲೆಡೆ ಬೀರಿ
ಒಂದೆ ಸಮ ಮುಂಬರಿಯುತಿದೆ ರಾಯನ ಸವಾರಿ!
ಮತ್ತೊಮ್ಮೆ ನಿಂತಿತದೊ ದೇಗುಲದ ಬಳಿಸಾರಿ
ದಿಙ್ಮಂಡಲವ ತುಂಬಿಹುದು ತಂಬಟೆ ನಗಾರಿ.
ಅದೆ ನೋಡು! ಕಲ್ಲಿನಲೆ ಕಲೆ ಮೊಳೆತ ವಿಖ್ಯಾತ
ವಿಜಯವಿಟ್ಠಲನ ಗುಡಿ! ಶಿಲ್ಪಕಲೆ ನವನೀತ!
ಅರೆಕೊರೆದ ಗುಡಿಯೊಂದೆ ಈ ಪರಿಯು ಮೆರೆದಿರಲು
ಪೂರ್ಣತೆಯ ವರ್ಣಿಸಲು ಈ ನಾಲಿಗೆಗೆ ಮಿಗಿಲು!
ಕಂಬಕಂಬಗಳೆಲ್ಲ ಕಥೆ ಹೇಳಿ ನಲಿನಲಿಯೆ
ಕೃಷ್ಣರಾಯನ ಚಿತ್ತ ಸಾರ್ಥವಾದುದು ಅರಿಯೆ.
ಇರುವೆ ಸಾಲಿಟ್ಟವೊಲು ಮುಂದೆ ನಡೆದುದು ಸಾಗಿ
ಗುರಿ ಮುಟ್ಟಿತೆನೆ ಕೇಳುತಿದೆ ತುತ್ತೂರಿ ಮೊಳಗಿ.

೨೩

ಮಾರನವಮಿಯ ದಿಬ್ಬದಲ್ಲಿಗೆ
  ಬಂದಿತದಗೋ ಭಟಗಣ!
ಎತ್ತ ನೋಡಲಿ ದಿಕ್ಕುದಿಕ್ಕಿಗೆ
  ತೂಗಿ ತೊನೆದಿವೆ ತೋರಣ!
ರಾಯ ಬಂದನು ಎಂದು ಸಾರಲು
  ಬಹು ಫಿರಂಗಿಯ ಹೊಡೆದರು.
ಆನೆಯಿಂದಲಿ ಇಳಿದು ಸಾರಲು
  ಎಲ್ಲ ಬಾಗುತ ನಮಿಪರು.
ಮಂಗಳಾರತಿ ಎತ್ತುತಿರುವರು
  ನಿಂತ ಪೆಣ್ಗಳು ಹರುಷದಿ.

ದಿವ್ಯಘೋಷವ ಮಾಡುತಿರುವರು
ಮಂಗಳಸ್ತುತಿಮಂತ್ರದಿ.
ಪಟ್ಟದಾನೆಯು ಪಟ್ಟಕುದುರೆಯು
ಬಂದು ನಿಲ್ಲಲು ಎದುರಲಿ
ರಾಯ ಮೆಚ್ಚುತ ಪೂಜೆ ಮಾಡಲು
ನಮಿಸಿ ನಿಂತವು ಕೆಲದಲಿ.
ನಗೆಯ ಬೀರುತ, ಬಗೆಯ ತೋರುತ
ನಡೆಯೆ ಸಿಂಹದ ಪೀಠಕೆ
ವಂದಿಮಾಗಧ ಮಂದಿ ಹೊಗಳುತ
ಮೈಯ ಮರೆವರು ಹರುಷಕೆ.

ಜಯ ಜಯತು ಕರ್ಣಾಟರಾಜ್ಯರಮಣ!
ಜಯ ಜಯತು ಗಜಪತಿಗರ್ವಾಪಹರಣ!
ಜಯ ಜಯತು ರತ್ನಸಿಂಹಾಸನಾಧೀಶ!
ಜಯ ಜಯತು ರಾಜಾಧಿರಾಜಪರಮೇಶ!
ಜಯ ಜಯತು ಸಂಗೀತಸಾಹಿತ್ಯವಿದ್ಯಾಧರ!
ಜಯ ಜಯತು ಅರಿರಾಯಮದಹಸ್ತಿದರ್ಪಹರ!
ಜಯ ಜಯತು ಕರ್ಣಾಟ ಆಂಧ್ರಕವಿತೇಜ!
ಜಯ ಜಯತು ವಿಜಯನಗರಾಧೀಶಭೋಜ!
ಜಯ ಜಯತು, ಜಯ ಜಯತು ವಿಜಯೀಭವ!

೭

ಅಷ್ಟದಿಗ್ಗಜ ಕವಿಗಳೆಲ್ಲರು
ಹೊಗಳತೊಡಗಲು ಸಭೆಯಲಿ
ತಲೆಯ ತೂಗುತ ಸುಮ್ಮನಾದರು
ಕೇಳಿಬಾರದು ಜನರುಲಿ.
ಗೀತ, ವಾದ್ಯದ ಸರದಿ ಬಂದಿತು
ನೃತ್ಯದೊಂದಿಗೆ ಮೆರೆಯಿತು

ಕುಣಿವ ಗಣಿಕೆಯರೆನಿತೊ ಬಂದರು
ಕುಣಿತ ಅಚ್ಚರಿ ಬೀರಿತು.
ಸಚಿವ ಸೇನಾಪತಿಯು ಸಾರುತ
ಬಾಗಿ ಕೊಟ್ಟರು ಕಾಣಿಕೆ
ರಾಯಭಾರಿಯು ತಂಡ ಸಾರುತ
ಕಪ್ಪವಿತ್ತರು ಜನಪಗೆ.
ಆನೆಕಾಳಗ, ಜಟ್ಟಿಕಾಳಗ,
ವಿವಿಧ ಆಟದ ಬೆಡಗಲಿ
ಸಾಗಿತೀಪರಿ ರಾಜನೋಲಗ
ಬೆರಗುಗೊಳಿಸುತ ಜಗದಲಿ.
ಎಲ್ಲರೊಲವನು ಇಂತು ಕೊಳ್ಳುತ
ಮರಳಿ ಕೊಟ್ಟನು ಕೊಡುಗೆಯ
ಬೆಲೆಯ ಕಟ್ಟುವರಾರು ಎನ್ನುತ
ಹಿಗ್ಗಿ ನಲಿದರು ಜಯ ಜಯ!
ವರುಷ ವರುಷದ ವಿಜಯವೈಭವ
ವಿಜಯನಗರದಿ ಸಾಗಿತು.
ದೇವಲೋಕದ ಇಂದ್ರವೈಭವ
ಇಳೆಯೊಳೀ ಪರಿ ಮೆರೆಯಿತು.

೭

ಕನ್ನಡ ನಾಡಿನ ಚಿನ್ನದ ಹಬ್ಬದ
ಶತಶತಮಾನದ ಕಥೆಯಿದು ಕೇಳು!
ನೆನೆದರೆ, ಮೈಮರೆಯುವುದೀ ಬಾಳು!
ಮೆರೆಯುವುದೆಂದಿಗೆ ಇಂದಿನ ಜನಪದ
ಬೆಳಗುವುದೆಂದಿಗೆ ಹಂಪೆಯ ಬೀಡು
ಇಂದೇ ಆಗಲಿ ಕನ್ನಡ ನಾಡು!

———

ಅನುಭವ

ಅನುಭವಕೆ ಮಿಗಿಲಾದ ಹಿರಿಯ ಸಂಪದವಿಲ್ಲ
ಅನುಭವವೆ ಪರಮಪದವು !
ಸ್ವಾನುಭವದಿಂದ ತಾ ಹಿರಿಯರಾದರು ಎಲ್ಲ
ಅನುಭವವೆ ಸಾಮ್ರಾಜ್ಯವು !

ಅನ್ಯರಾಶ್ರಯದಲ್ಲಿ ಸಿದ್ಧಿ ದೊರಕುವುದಿಲ್ಲ
ಕೊಂಡು ತರುವುದೂ ಅಲ್ಲ.
ಸತತ ದುಡಿವುದೆ ದಾರಿ, ಬೇರೆ ಮಾರ್ಗವೆ ಇಲ್ಲ,
ಅನುಭವವೆ ಜೇನು, ಬೆಲ್ಲ.

ಸೋಲು ಗೆಲುವುಗಳುಂಟು, ಏಳು ಬೀಳುಗಳುಂಟು,
ಗುರಿಯ ಸಾಧಿಸಲು ವಿಜಯ !
ಅನುಭವದ ಹೊಂಬೆಳಕು ಯುಗಯುಗಾಂತರಕುಂಟು
ಅದುವೆ ಚೈತನ್ಯ ಅಭಯ !

ಒಡವೆ ನಾಣ್ಯಗಳಂತೆ ಕೈಗೆ ಸಿಕ್ಕುವುದಲ್ಲ
ಬೀಯವಾಗುವುದೆ ಇಲ್ಲ.
ಅಡಿಗಲ್ಲಿನಂತಿಹುದು ಲೋಕದೇಳಿಗೆಗೆಲ್ಲ
ಬೆಲೆಯ ಹೇಳುವಂತಿಲ್ಲ.

ಋಣ

ಆಹ ! ಋಣದ ಭಾರ ಎಂತಽಪಾರ ಒಮ್ಮೆ ನೆನೆಯಲು !
ಜನುಮ ಜನುಮ ಸಾಲದಯ್ಯ ಋಣವಿಮುಕ್ತನಾಗಲು !

ಜನ್ಮದಾತ ಆ ವಿಧಾತ
ತಿಳಿವನೆರೆದ ಗುರುವ್ರಾತ
ಪರಮಪೂಜ್ಯರು !
ತಂದೆ, ತಾಯಿ, ಬಂಧು, ಮಿತ್ರ,
ಸ್ವಾರ್ಥವಿರದ ನಲ್ಲೆ ಪಾತ್ರ
ಎಲ್ಲ ವಂದ್ಯರು !

ಬೀಸಿ ಬರುವ ಗಾಳಿ ಕೂಡ
ಉಸಿರನಿತ್ತುದು.
ಈಸಿಬರುವ ನೀರವೋಡ
ಧಗೆಯ ತೊಡೆದುದು.
ಜ್ಯೋತಿವೆತ್ತದೊಂದು ಲೀಲೆ
ಕಣ್ಣ ಬೆಳಕಿದು.
ಪೃಥ್ವಿಮಾತೆ ತೊಡೆಯ ಮೇಲೆ
ಬಾಳು ಬೆಳೆವುದು.
ಗಗನದಿಂದ ಇಳಿದುಬಂದ
ಜೀವ ತಾನಿದು.
ಗಗನದೆಡೆಗೆ ತೆರಳಲೆಂದು
ಕಾಯುತಿರುವುದು.

ಪಂಚಭೂತದಿಂದ ಪಡೆದು ರೂಹುವೆತ್ತುದೀ ಪರಿ !
ಸಾಲದಂತೆ ತೀರಲಳವೆ ? ಋಣದ ರೀತಿ ಅಚ್ಚರಿ !

ಬೆಟ್ಟದಂಥ ಋಣದ ರಾಶಿ ಇನಿತು ಕರಗದಿರುವುದು
ಹುಟ್ಟಿದೊಡನೆ ಬಂದೆ ಬಂತು ಹೇಳಕೇಳದಂತಿದು.
ಸ್ವಾರ್ಥವಿರದ ಸೇವೆಗಿಂದು ಬೆಲೆಯು ಹೇಳಬರುವುದೆ ?
ದೇಹದಲ್ಲಿ ಕಣಕಣವೂ ಋಣಕೆ ಮೀಸಲೆನಿಸಿದೆ.

ಋಣದ ಚಕ್ರ ಬಹುವಿಚಿತ್ರ
ಮೀರಲಸದಳ !
ಋಣದ ಸೂತ್ರ ಬಹುಪವಿತ್ರ
ಕಡಿಯಲಸದಳ !
ಜೀವ-ಋಣದ ನಿತ್ಯಬಂಧ
ಇಂತು ಸಾಗಿದೆ
ಬೆಸೆದು ಬಂದ ವಜ್ರಬಂಧ
ಮುಂದೆ ನಡೆದಿದೆ.

ಋಣದ ಭಾರ ಎಂತಃಪಾರ ನೆನೆವುದೊಂದೆ ದಾರಿಯು !
ತೃಣದ ಬಾಳು ಋಣದ ಹೊರೆಯ ಹೊರೆವುದೊಂದೆ ರೀತಿಯು !

ನಮ್ರಭಾವವೊಂದೆ ವೇದ್ಯ
ಅದುವೆ ಋಣಕೆ ಕಾಣಿಕೆ !
ಶುದ್ಧಚಿತ್ತವೊಂದೆ ಹೃದ್ಯ
ನಮಿಸು, ಋಣದ ಪಾದಕೆ !

ಕ್ರಾಂತಿಪಲ್ಲವಿ

ಸುತ್ತುಮುತ್ತಲು ಕ್ರಾಂತಿಪಲ್ಲವಿ
ಕೇಳಿಬರುತಿದೆ ಕೇಳಿರಿ!
ದಾಸ್ಯಶೃಂಖಲೆ ಕಳಚಿಬೀಳಲು
ಘೋಷವೆದ್ದಿದೆ ಕೇಳಿರಿ!
ಹಳೆಯ ಬಾಳಿನ ಜಾಡ್ಯ ಕಳೆಯುವ ಕಾಲವಿಂದಿದೊ ಬಂದಿದೆ.

ದೀನ, ಬಡಜನ, ಅಲ್ಪರೆನ್ನುವ
ಮಾತು ಈ ದಿನ ಸಲ್ಲದು.
ಎಲ್ಲರೆದೆಯನು ಹೊಕ್ಕಿನೋಡುವ
ಕಾಲವಿಂದಿದೊ ಬಂದುದು.
ಸದ್ದುಗದ್ದಲವಿಲ್ಲದೆದೆಯಲಿ ತುಮುಲವೆದ್ದಿದೆ ಗುಡುಗುತ.

ಆಳ್ವ ಚಪಲವೊ, ಅಟ್ಟಹಾಸವೊ,
ದರ್ಪ ದಬ್ಬಾಳಿಕೆಗಳೊ
ಮೇಲು ಕೀಳುಗಳೆಂಬ ಭೇದವೊ
ಅರ್ಥವಿಲ್ಲದ ನಡೆಗಳೊ
ತುತ್ತತುದಿಯನು ಕಾಂಬ ಗಳಿಗೆಯು ಇಂದು ಹತ್ತಿರ ಬಂದಿದೆ.

ಹೊಟ್ಟೆಗಿಲ್ಲದೆ ಸುಡುವ ಬಡತನ
ಭುಗ್ಗನೆದ್ದಿರೆ ಕೆರಳಿಸಿ
ಒಟ್ಟುಗೂಡುವ ದಿಟ್ಟತನದಲಿ
ಹಿಡಿದ ಹಟವನು ಸಾಧಿಸಿ
ನಡೆವ ಮಲ್ಲರ ಜಯದ ಭೇರಿಯು ಸದ್ದು ತುಂಬಿದೆ ನಾಡಲಿ.

ತ್ಯಾಗ, ಸೇವೆಯ ಗೈದ ಧೀರರು
ರಾಜ್ಯಸೂತ್ರವ ಹಿಡಿದರು

ಬೆಪ್ಪು ಬಡಿದೊಲು ತೆಪ್ಪಗಾದರು
ಬರಿಯ ಮಾತಿನ ಮಲ್ಲರು.
ನವಪ್ರಪಂಚದ ಗಾಳಿ ಬೀಸಲು ಹುರುಪು ಹುಮ್ಮಸು ಮೂಡಿದೆ.

ತಂಡಗೂಡುತ ಬರುತಲಿರುವರು
ಬಿಸಿಯ ರಕ್ತದ ಯುವಜನ
ತಮ್ಮ ಹಕ್ಕಿಗೆ ಹೆಣಗುತಿರುವರು
ದುಡಿದು ಬದುಕುವ ಬಡಜನ.
ಕ್ರಾಂತಿಕಾಲದ ಇಂಥ ಚಿತ್ರವ ಕಾಂಬ ಜನಗಳೆ ಧನ್ಯರು.

ಆತ್ಮಗೌರವ ಕುಂದಲಾಗದು
ಇಂದಿನೀ ಸಮಯುಗದಲಿ
ಜನರ ಮೌಢ್ಯವ ಸಹಿಸಲಾಗದು
ಪ್ರಗತಿದಾಯಕ ಜಗದಲಿ.
ಮುಂದೆ ನುಗ್ಗಲು ಹೆದರಿ ಉಳಿಯುವ ಹೇಡಿ ಇರುವನೆ ಈ ದಿನ?

ಕ್ರಾಂತಿಪಲ್ಲವಿ ಮಿಡಿಯುತಿರುವುದು
ನುಡಿಯುತಿರುವುದು ಮೊಳಗುತ
ದೇಶದೇಶವೆ ತವಕಗೊಂಡಿದೆ
ಏಳ್ಗೆದಾರಿಯ ಬಯಸುತ
ಜಯಪತಾಕೆಯ ಹಿಡಿದು ಸಾರುವ ಬನ್ನಿ ಗುರಿಯನು ಸಾಧಿಸೆ.

ಕೆಚ್ಚು

೧

ಏನಿದೇನಿದು ! ಏನಿದೇನಿದು !
  ಹರೆಯ ತುಂಬುವ ಮುನ್ನವೆ
ಮನವು ಕುಗ್ಗಿದೆ, ಮಂಕು ಕವಿದಿದೆ,
  ಬೆಳೆವ ಬದುಕಿಗೆ ಚೆನ್ನವೆ ?

ಅರ್ಥವಿಲ್ಲದ ಕೋಪ ಕೆರಳಿದೆ
  ತುಮುಲವೆದ್ದಿದೆ ಎದೆಯಲಿ
ಸುಡುವ ಬೇಸರ ಕವಿದುಬಂದಿದೆ
  ಹರಿಯದಂತಿದೆ ಬಗೆಯಲಿ.

ಯಾವುದೋ ಗುರಿ ಜಾರಿತೆಂದು
  ಕೊರಗಿ ಕುಗ್ಗಿದೆ ಈ ಮನ.
ಬಯಸಿದಾಸೆಯು ಸಲ್ಲದೆಂದು
  ಅಳುಕಿ ಕಲಕಿದೆ ಈ ಮನ.

ಸುತ್ತುಮುತ್ತಲ ಪ್ರಕೃತಿಸನ್ನಿಧಿ
  ಬಯಲಭ್ರಾಂತಿಯಿದೆನಿಸಿದೆ
ಬಂಧುಬಳಗಗಳೆಂಬುದೆಲ್ಲ
  ತೀರ ಕೃತಕವೊ ಎನಿಸಿದೆ.

ಬಾಳ ಗುಟ್ಟನು ಬಿಡಿಸಲರಿಯದೆ
  ಬದುಕು ಹೊರೆಯೆಂದೆನಿಸಿದೆ,
ಅರ್ಧ ವಯಸೂ ದಾಟದಂತಿದೆ
  ಸಾಕು ಜೀವನ ಎನುತಿದೆ.

ಏನಿದೇನಿದು, ಏನಿದೇನಿದು,
  ಹರೆಯ ತುಂಬುವ ಮುನ್ನವೆ
ಮನವು ಕುಗ್ಗಿದೆ, ಮಂಕು ಕವಿದಿದೆ,
  ಬೆಳೆವ ಬಾಳ್ಗಿದು ಚೆನ್ನವೆ?

೨

ಸಾಕು ಸಾಕೀ ಹುಚ್ಚು ತಲ್ಲಣ
  ಧೈರ್ಯ ಗುಡುಗಲಿ ಎದೆಯಲಿ
ಕೆಚ್ಚಿನಿಂದಲಿ ಏಳು ಈ ಕ್ಷಣ
  ತುಂಬುಹರೆಯದ ಹುರುಪಲಿ.

ಪೆಚ್ಚುಮೋರೆಯ ಮಂಕು ಸಾಕು
  ಹುಬ್ಬುಗಂಟನು ಸಡಿಲಿಸು
ಕೊರೆವ ಮೌನವ ಆಚೆ ನೂಕು
  ಜನರ ನೇಹವನಾಶಿಸು.

ಪರರ ಸಿದ್ಧಿಗೆ ಕೈಯ ಚಾಚದೆ
ಹೆರವರುನ್ನತಿ ಕಂಡು ಕರುಬದೆ
ನಿನ್ನ ಸಿದ್ಧಿಯ ನೀನೆ ಸಾಧಿಸು
  ನೆಚ್ಚುಗೆಡದೊಲು ಹಟದಲಿ.

ಇಂದು ಕಾಂಬುದು ಕಷ್ಟವಲ್ಲ
ಮುಂದೆ ಇರುವುದು ಬೆಟ್ಟವಲ್ಲ
ಸುಖವೊ ಸುಮ್ಮನೆ ಸಿಗುವುದಿಲ್ಲ
ಯಾವ ಗೈಮೆಯು ವ್ಯರ್ಥವಲ್ಲ
  ಎಂಬ ನಂಬಿಕೆ ಮೂಡಿರೆ
ಇಂದೊ, ನಾಳೆಯೊ—ನುಡಿವರಿಲ್ಲ—
  ಸಿದ್ಧಿ ದೊರೆವುದು ತಾಳಿರೆ.

ಬಿಸಿಯ ನೆತ್ತರು ಹರಿಯುತಿರಲು
ಏಕೆ ಬೆದರುವೆ ದುಃಖಕೆ?
ಯಾರ ಬಿಟ್ಟಿತು ಸುಡುವ ಅಳಲು
ಭೇದಭಾವವೆ ದುಃಖಕೆ?

ಸೀತೆ ಸಹಿಸಳೆ, ರಾಮ ಸಹಿಸನೆ,
ಪಂಚಪಾಂಡವರುಳಿದರೆ?
ದೇವ–ಮಾನವರೊಂದೆ ಸಮನೆ
ಸಿಕ್ಕಿ ತೊಳಲದೆ ಹೋದರೆ?

ಬೆವರ ಹನಿಯನು ಸುರಿಸದಂತೆ
ಬಯಸಬಹುದೇ ಸುಖವನು?
ತೀರ ಸುಲಭವು ಬೆಣ್ಣೆಯಂತೆ
ಎಂದು ಬಗೆದೆಯ ಬದುಕನು!

ಹುಟ್ಟನಿಂದಲಿ ದೊಡ್ಡ ಪದವಿಯ
ಪಡೆಯಬಲ್ಲರು ಹಲವರು
ಕೆಲವು ಮಂದಿಗೆ ದೊಡ್ಡ ಪದವಿಯ
ವಹಿಸಿಕೊಡುವರು ಆಪ್ತರು.

ಸ್ವಪ್ರಯತ್ನದಿ ದೊಡ್ಡ ಪದವಿಯ
ಗಳಿಸುವವನೇ ಧೀರನು!
ಕಷ್ಟನಷ್ಟವ ಪೆಡಸು ದಾರಿಯ
ಯಾವುದೊಂದನು ಗಣಿಸನು.

೮

ವೈರಿಯ ಕೊಡಹುತ ಮೇಲಕೇಳು
ದಿಟ್ಟ ಧೈರ್ಯವ ಬಿಡದೆ ತಾಳು
ನುಗ್ಗು ಮುಂದಕೆ ಜಗ್ಗದೆ!

ಸೋಲೊ, ಗೆಲುವೋ, ಚಿಂತೆಯೇತಕೆ
ಲೋಪವಿಲ್ಲದೆ ನಿನ್ನ ಕೆಲಸಕೆ
ದುಡಿದ ತೃಪ್ತಿಯೆ ಸಾಲದೆ?

ಕ್ಷಣಕ್ಷಣಕ್ಕೂ ಬೆಳೆವ ಜಗದಲಿ
ಹೊಸ ಸಮಸ್ಯೆಯು ಸಾಲುಸಾಲಲಿ
ಗುಂಪುಗೂಡುತ ಬರುತಿವೆ.

ಯಾವುದೊಂದಕು ಬೆದರದಂತೆ
ಯಾವುದೊಂದಕು ಅಳುಕದಂತೆ
ಸ್ಥೈರ್ಯದಿಂದಲಿ ಎದುರಿಸು.

ಅಳಲು, ಅಂಜಿಕೆ, ಶಕ್ತಿಹೀನತೆ,
ಯಾವುದೊಂದೂ ನಿಲ್ಲದು!
ಗಂಡುಗಲಿತನವೊಂದೆ ಉಳಿವುದು
ಬೇರೆ ಯಾವುದು ನಿಲ್ಲದು!

ವಿನಯ, ವಿನಯ, ವಿನಯವೆನ್ನುತ
ಅಂಗಲಾಚುತ ನಿಲ್ಲದೆ,
ಆತ್ಮಗೌರವವಿನಿಸು ಕುಂದದೆ
ನುಗ್ಗು ಮುಂದಕೆ ಕುಗ್ಗದೆ.

ಆತ್ಮಸಂಯಮ, ಆತ್ಮನಂಬಿಕೆ,
ಆತ್ಮತೃಪ್ತಿಯ ಸಿರಿಯಲಿ
ತುಂಬುಯೌವನ ಬೆಳಗಲಿ!

ಬಿಂದುರಕ್ತವು ಇರುವತನಕ
ಇನಿಸು ಬೇಸರವಿಲ್ಲದೆ
ಬದುಕು ಸಾಗಲಿ ನಿಲ್ಲದೆ!

ಏನು ದುಡಿಯದ ಸಪ್ಪೆಜೀವನ
ತೀರ ವ್ಯರ್ಥದ ಜೀವನ.
ದುಡಿದು ಕಟ್ಟಿದ ದಿವ್ಯಜೀವನ
ಕ್ಷಣಿಕವಾದರು ಪಾವನ !

ಮನುಜಶಕ್ತಿಯು ನೆಚ್ಚಿ ದುಡಿವುದೆ
ಬೆಳೆವ ಬಾಳಿಗೆ ಐಸಿರಿ
ದಿಟ್ಟತನದೊಂದಚ್ಚರಿ !

ಕಟುನುಡಿ

ದಿಟವ ನುಡಿಯುವೆನೆಂದು ಕಟುನುಡಿಯ ಆಡದಿರು
ಹಟ ತೊಟ್ಟು ಹೊರಟವರು ಮಣ್ಮುಕ್ಕಿದರು ಹಲರು.
ಕೆರಳಿ ಕನಲಿದ್ದವರು ಕಡೆಗೆ ಕೊರಕೊರಗಿಹರು
ತೆಗಳಿ ಕೈ ಬಡಿದವರು ತಾವ್ ತೆಪ್ಪಗಾಗಿಹರು!

ಬೆಳೆವ ಎಳೆಸಸಿ ಮೇಲೆ ಕಲ್ಲ ಹೇರಲುಬಹುದು
ಮರುಗಿ ಕನಿಕರದಿಂದ ಕೈನೀರ ಹೊಯ್ಬಹುದು
ನಿನ್ನ ಶಪಿಸಲು ಸಾಕು ಒಂದು ಹನಿ ದುಃಖಾಶ್ರು
ನಿನ್ನ ನೆನೆಯಲು ಸಾಕು ಒಂದು ಹನಿ ಹರ್ಷಾಶ್ರು.

ಎಳೆಯ ಮೊಳಕೆಯ ತುಳಿದು ಮುಂದೆ ಸಾಗುವ ನೀನು
ಕನಿಕರದ ಕಣ್ಣಿರದ ಕಟುಕನಲ್ಲದೆ ಏನು!
ಅವರವರ ಅನುಭವಕೆ ಅವರವರ ನುಡಿ ಸಾಕ್ಷಿ!
ನೂರು ತೆರ ಹಾರಾಡುವುದು ನೂರು ಬಗೆ ಪಕ್ಷಿ!

ಕೋಪತಾಪಗಳಲ್ಲಿ ಬದುಕಿ ಬಾಳ್ದವರಿಲ್ಲ
ಮತ್ಸರವ ಮಸೆದವರು ಮನಜರೆನ್ನಿಸಲಿಲ್ಲ
ಕೂರಲಗ ಬೀಸಿದರೆ ಕೊಂದುಹಾಕುವುದೊಮ್ಮೆ
ಕಟುನುಡಿಯು ಕಹಿ ಕೊರೆಯುವುದು ಮತ್ತೆ ಮತ್ತೊಮ್ಮೆ.

ಚಿಂತನ

ಸುಮ್ಮನಿಲ್ಲ ಬಿಮ್ಮನಿಲ್ಲ
ನನ್ನ ಮನಸಿದು.
ತನ್ನತನವ ಕಾಣೆನಲ್ಲ
ಎನುತಲಿರುವುದು.

ನಿತ್ಯ ನಿತ್ಯ ನಿಜವನರಸಿ
ಜಪಿಸುತಿರುವುದು.
ದೃಢವ ಕಂಡು ನುಡಿಯುಬಯಸಿ
ಮಿಡಿಯುತಿರುವುದು.

ಬರಿಯ ನೊರೆಯ ಬೆಡಗ ಕಂಡು
ಬೇಸರಾಗಿದೆ.
ಅರಿವಿಗಾಗಿ ದಾಹಗೊಂಡು
ನುಗ್ಗಿ ನಡೆದಿದೆ.

ಆತ್ಮತೃಪ್ತಿ ಫಲಿಸದಿರಲು
ಏನ ನುಡಿಯಲಿ ?
ನನ್ನ ನಾನೆ ಕಾಣದಿರಲು
ಏನನೊರೆಯಲಿ ?

ಕಣ್ಣನೋಟ ಸುಳಿಸಿದತ್ತ
ಮಂಜು ಮುಸುಕಿದೆ.
ಒಳಗು ಹೊರಗು ಸುತ್ತಮುತ್ತ
ಪ್ರಶ್ನೆಯಾಗಿದೆ.

ಅನ್ಯರೊಲವು ಮಾನ್ಯವಲ್ಲ
ನಾನೆ ತಣಿಯದೆ.
ಸೊಲ್ಲಿಗಿನಿತು ಬೆಲೆಯೆ ಇಲ್ಲ
ಸ್ಫೂರ್ತಿ ಇಲ್ಲದೆ.

ಕನಸ ಕಂಡ ಕಣ್ಣಿಗಿಂದು
ನನಸು ಕಾಣದೆ?
ಮನದ ಬೆಳಕು ಬೆಳಗಿದಂದು
ಶಂಕೆ ಹರಿಯದೆ?

ಮೂರು ಹೊತ್ತು ಇದೇ ಚಿಂತೆ
ಇದುವೆ ಚಿಂತನ!
ಕುದಿವ ಮೌನ ರನ್ನದಂತೆ
ಧ್ಯಾನ ಸಾಧನ!

ಉತ್ತರ ಕರ್ಣಾಟಕ

ವರುಷ ವರುಷದಲಿ ಕನಸ ಕಾಣುತಲಿ
ನೆನೆದ ನಾಡಿದುವೆ ನಾಡು !
ತುಂಗಭದ್ರೆಯಾ ಉತ್ತಮಾಂಗದಲಿ
ಹಬ್ಬಿ ಹರಡಿರುವ ಬೀಡು !

ತುಂಬುಹೊಲವೆಲ್ಲ ಇಂಬುಗೊಡುತಿಹುದು
ನೇಹ, ರೂಪ ತಳೆದಂತೆ !
ಬಾರಿಬಾರಿಗೂ ತೂಗಿ ತೊನೆದಿಹುದು
ಕೈಯ ಬೀಸಿ ಕರೆದಂತೆ !

ಒಂದೆ ನುಡಿಯಾಡಿ ಬೇರೆ ಬೇರಿರುವ
ಬಂಧುಬಳಗವನು ಕಂಡೆ.
ಎಂದೊ ಒಡನಿದ್ದು ಇಂದು ಒಡೆದಿರುವ
ಅಣ್ಣತಮ್ಮದಿರ ಕಂಡೆ.

ಕೆಚ್ಚು ಕನ್ನಡಿಗರೊಬ್ಬರೊಬ್ಬರನೆ
ಕಂಡು, ಕೈಮುಗಿದು ಬಂದೆ.
ಕೇಳಿ ಕಾಣದಿಹ ಹಿರಿಯ ಕಿರಿಯರನೆ
ನೋಡಿ, ಸೌಭಾಗ್ಯವೆಂದೆ.

ಕನ್ನಡದ ನುಡಿಯ ಕೇಳಿ ಹಿಗ್ಗಿಹುದು
ಅಕ್ಕತಂಗಿಯರ ಸಾಲು.
ನುಡಿಯ ಮುನ್ನಡೆಗೆ ಮುಂದೆ ನುಗ್ಗಿಹುದು
ಉಂಟು ಎಲ್ಲರಿಗು ಪಾಲು.

ಹಕ್ಕಿಗಿಂತಲೂ ಮನವು ಹಗುರಾಯ್ತು
ಗೆಳೆಯನೊಲುಮೆಯಲಿ ಮಿಂದು.

ಚುಕ್ಕಿಗಿಂತಲೂ ತನುವು ಕಿರಿದಾಯ್ತು
ಇರವು ಮರೆತಂತೆ ಅಂದು !

ನಿಮಿಷನಿಮಿಷಗಳು ನಿಲ್ಲದೋಡಿದುವು
ಸವಿಯ ಸೊಲ್ಲಿನಲಿ ಬೇಗ.
ನುಡಿಯ ಸಾರದಲಿ ಒಂದುಗೂಡಿದೆವು
ಕೆಳೆಯತನದಲ್ಲಿ ಆಗ.

ಬರಿಯ ಹೆಸರಲ್ಲ ಸಿದ್ಧಿ ಸಾರಿರುವ
ಹಿರಿಯ ಸಾಧನದ ಕೇರಿ !
ಚೆಲುವ ಸೂಸುತಿಹ ಹಸುರನುಟ್ಟಿರುವ
ಹರವಿಗಿತ್ತಿಹರು ಕೋರಿ.

ನಾಡ ಸೇವಕರು ನುಡಿಯ ಭಾವುಕರು
ಕಲೆಯ ಪೋಷಕರು ಇಹರು.
ಹಟವ ತೊಟ್ಟಿರುವ ದಿಟದ ಮನ್ನೆಯರು
ಗುರಿಯ ಸಾಧಿಸದೆ ಬಿಡರು.

ಪರಿಚಯದ ಬಳ್ಳಿ ನೆಟ್ಟುಬಂದಿಹೆನು
ಒಂದು ನೂರಾಗಿ ಬೆಳೆಯೆ.
ಬಿಟ್ಟು ಬಂದರೂ ಮರೆಯದಂತಿಹೆನು
ಮರಳಿ ಮತ್ತೊಮ್ಮೆ ಸುಳಿಯೆ.

ನುಡಿಯ ಬಲ್ಮೆಯನು ಎದೆಯ ಒಲ್ಮೆಯನು
ಹಾಡಿ ಹೊಗಳುವುದು ಅಳವೆ ?
ಒಟ್ಟುಗೂಡಿರುವ ನಾಡ ಮೇರೆಯನು
ಅಳಸಿ ಕೆಡೆಸಿಹುದು ತರವೆ ?

ತಪೋಭಂಗ

ತಪೋಭಂಗ ತಪೋಭಂಗ
ತಪ್ಪಲಿಲ್ಲ ಇಂದಿಗು.
ತಪೋಭಂಗ ತಪೋಭಂಗ
ತಪ್ಪದೇನು ಎಂದಿಗು ?

ವರುಷ ವರುಷ ಸೆರೆಯ ವಾಸ
ಪರುಷ ಶಬ್ದ, ಜರಿವ ಹಾಸ,
ಸಹಿಸಿದಂಥ ಕಲಿಗಳೆ!
ಸ್ವಾತಂತ್ರ್ಯಸಮರದಲ್ಲಿ
ಘೋರ ವೈರಿ ಎದುರಿನಲ್ಲಿ
ದರ್ಪದೆದುರು ಜಗ್ಗದಂತೆ
ದುಃಖದೆದುರು ಕುಗ್ಗದಂತೆ
ನಿಂತ ಅಚಲ ಕಲಿಗಳೆ!
ನಿಷ್ಠೆ ನಿಯಮ ಸಡಿಲವಾಯ್ತೆ
ಐಕ್ಯಸೂತ್ರ ಛಿದ್ರವಾಯ್ತೆ
ಮರೆತರೇನು ಆಗಲೆ ?

ಮೊಳಗಿನಂಥ ನಿಮ್ಮ ನುಡಿಗೆ
ತೊಳಗುವಂಥ ನಿಮ್ಮ ನಡೆಗೆ
ಮೂಲೆ ಮೂಲೆ ಮೂಲೆಯೆಲ್ಲ
ನಾಡ ಮಂದಿ ನಂಬುತೆಲ್ಲ
ಸಾಲು ಸಾಲು ನೆರೆಯುತಿತ್ತು
ಜಯದ ಘೋಷ ಬಿರಿಯುತಿತ್ತು
ಮರೆವುದೆಂತು ಆ ದಿನ ?

ನಾಡಿಗಿನ್ನು ಉಸಿರೆ ಇಲ್ಲ
ಹಸಿದ ಹೊಟ್ಟೆ ತುಂಬಲಿಲ್ಲ
ದೀನ ಜನರ ಕಣ್ಣಬೆಳಕು
ಬೆಳಗದಿನ್ನು, ಬರಿಯ ಮಸಕು
ದಾರಿ ಕಂಗೆಟ್ಟಿದೆ.

ವಿಷವ ಮೀರಿದಂಥ ವಿರಸ
ನಿಮ್ಮ ನುಂಗಲೆಳಿಸಿದೆ
ಸ್ವಾರ್ಥದಾಹ ನಿಮಿಷ ನಿಮಿಷ
ಹೆಚ್ಚುತಿಹುದು ತಪ್ಪದೆ.

ತಂಡಗೂಡಿ ದುಡಿದ ಮಂದಿ
ತಂಡತಂಡವೊಡೆಯುತಿದೆ
ಸಂತವಿಟ್ಟು ನಡೆದ ಮಂದಿ
ನುಡಿಯು ಕಿಡಿಯು ಕಾರುತಿದೆ.

ಆಳ್ವ ಚಪಲ ಮೋಹಗೊಳಿಸಿ
ಅಂಧಕಾರ ಕವಿದಿದೆ !
ಮಾಯೆಯಿಂತು ರೂಪ ಧರಿಸಿ
ತಪೋಭಂಗವೆಸಗಿದೆ !

ದೀಕ್ಷೆ

ಏರು ಎತ್ತರಕೆ ಸಾರು ಬಿತ್ತರಕೆ
ವಾಯುವೇಗವನು ಮೀರಿ
ದೇಹಪಂಜರದಿ ಏಕೆ ತೂಕಡಿಕೆ
ಮನವೆ, ನೀ ಚರಿಸು ಹಾರಿ!

ಸೃಷ್ಟಿವೈಶಾಲ್ಯ ಕಿರಿದು ಎಂಬುವೊಲು
ದೃಷ್ಟಿವೈಶಾಲ್ಯ ಮೆರೆಯೆ
ಸಪ್ತ ಲೋಕಗಳ ಮೇರೆ ಮೀರುವೊಲು
ಸುಳಿದು ಬಾ, ಸತ್ವವರಿಯೆ.

ಮೋಹ ಗೆಲ್ಲುವೊಡೆ, ದಾಹ ಅಡಗುವೊಡೆ
ದೇಹದಾಸ್ಯವನು ಜಯಿಸು.
ಆತ್ಮಸಂಯಮದ ಸೂತ್ರ ಹಿಡಿಯುವೊಡೆ
ತನುವಿನಾಳ್ವಿಕೆಯ ಧರಿಸು.

ಮೃತ್ಯು ನಾಚುವೊಲು ಮರ್ತ್ಯಶಕ್ತಿಯನು
ಮೆರೆಸೆ ಸಂಕಲ್ಪಸಿದ್ಧಿ
ಇಲ್ಲೆ ನೀಡುವುದು ಅಮರಪದವಿಯನು
ಬೆಳಗೆ, ಮಾನವನ ಬುದ್ಧಿ.

ಅಂಧಕಾರವನು ಕೊಂದು ಮುನ್ನಡೆದು
ಜ್ಞಾನತೇಜದಲಿ ಬೆಳಗಿ
ಜಗದ ಮಾಲಿನ್ಯ, ಕೃಪಣತೆಯ ಕಳೆದು
ಮಿಂದು ಮಡಿಯಾಗು ತೊಳಗಿ.

ಏರು, ಮೇಲೇರು, ಅಮಿತ ವೇಗದಲಿ
ಮನದ ಭವ್ಯ ಆಕಾಂಕ್ಷೆ
ದಿವ್ಯದರ್ಶನದ ಅಮೃತವರ್ಷದಲಿ
ಇಂದೆ ತೊಡು ನೀನು ದೀಕ್ಷೆ.

ನರಕಚತುರ್ದಶಿ

ಓಹೋ ! ನರಕಾಸುರಸಂಹಾರ !
ದೀಪಾವಳಿಗಾಯಿತು ಅವತಾರ !

ಭೂದೇವಿಯುದಿಸಿದ ಆ ತನುಜಂ
ದಿನದಿನದಲಿ ತಾನಾದನು ದನುಜಂ !
ನಡುನಡುಗಿತು ತಲ್ಲಣಿಸಿತು ಲೋಕಂ
ದಿಗಿಲೆದ್ದಿತು ದಿವಿಜರ ನೆಲೆ ನಾಕಂ !

ಮೊರೆ ಮುಟ್ಟಿತು ಶ್ರೀಕೃಷ್ಣನ ಕಿವಿಗೆ
ನಡೆತಂದನು ಶಂಖಧ್ವನಿ ವೊಳಗೆ.
ದೈವದ ಬಲ ದೈತ್ಯನ ಛಲ ಸೆಣಸೆ
ಕೊನೆಗಂಡಿತು ರಣಕೇಳಿಯ ವರಸೆ.

ನರಕಾಸುರ ಭೂದೇವಿಯ ಪುತ್ರಂ
ಈ ಪರಿ ಏಕಾದನೊ ? ಇದು ಚಿತ್ರಂ !
ಕಡೆಗಾಲದಿ ಕೈಮುಗಿಯಲು ದೈತ್ಯಂ
ಎಂದನು ಹರಿ, " ಹೆಸರುಳಿಯಲಿ ನಿತ್ಯಂ."

ಅಸುರನ ಆಟೋಪಕೆ ಸಲೆ ಶಿಕ್ಷೆ
ಶರಣೆನ್ನಲು ದೊರೆಯಿತು ಕೃಪೆಭಿಕ್ಷೆ !
ಅವನತಿಯಲಿ ಉನ್ನತಿಯನು ಪಡೆದು
ನರಕಾಸುರ ಚಿರವಾದನು ಮಡಿದು !

ನರಕಚತುರ್ದಶಿಯಲಿ ಜನ ನಲಿಯೆ
ಬೆಳಗಿದೆ ಇಳೆ ದೀಪಾವಳಿ ಮೆರೆಯೆ !
ಮಾನವನೆದೆ ಕಾರುಣ್ಯವೆ ಒಲಿದು
ಜಗ ಬೆಳಗಲಿ ಅಸುರತ್ವವ ಕಳೆದು.

ನಾಡಹಬ್ಬ

ನಾಡಹಬ್ಬದ ಹಾಡ ಹಾಡುವ ಬನ್ನಿರೆಲ್ಲರು ಬನ್ನಿರಿ
ಕೂಡಿ ಮಣಿಯುವ ನೋಡಿ ತಣಿಯುವ ಒಂದುಗೂಡುತ ಬನ್ನಿರಿ!
ಹಿಗ್ಗಿನಿಂದಲಿ ಹೃದಯವುಕ್ಕಲು ಹರುಷ ಹೊಮ್ಮುತ ಮೆರೆವುದು
ಸಗ್ಗಸೊಗವನು ಮೀರುವಂದದಿ ತಿರೆಗೆ ಸಂತಸ ಸುರಿವುದು.

ಎನಿತು ಸುಂದರ ಎನಿತು ಬಂಧುರ ಶರದ ಋತುವಿನ ಚಂದಿರ!
ಮಿನುಗಿ ಮಿಂದಿದೆ ಬೆಳ್ಳಿ ಬೆಳಕಲಿ ಪ್ರಕೃತಿದೇವಿಯ ಮಂದಿರ!
ಏನು ಸಡಗರ, ಏನು ಸಂಭ್ರಮ, ಏನು ಜನಗಳ ಸಂತಸ.
ಬಾನಿನೆತ್ತರಕೇರಿ ಮುಟ್ಟಿದೆ, ಪುಳಕಗೊಂಡಿದೆ ಆಗಸ.

ಶಾರದಾಂಬೆಯ ಪೂಜೆಯೋ, ದುರ್ಗಿದೇವಿಯ ಸೇವೆಯೋ
ಮಾರನವಮಿಯ ಹಾಡ ಹಾಡುವ ಗಂಡುಹುಡುಗರ ದಾಳಿಯೋ
ವಿಜಯದಶಮಿಯ ವೀರ ಸಿರಿಯೋ, ನಿತ್ಯ ಹರಿಕಥೆ ಪೂಜೆಯು!
ಬಿಜಯಗೈದಿವೆ ನಾಡಹಬ್ಬಕೆ ಇಮವೆ ಮಂಗಳದೊಸಗೆಯು!

ಗೊಂಬೆ ಪಂಕ್ತಿಯ ಕೂಡಿಸಿರುವರು ಸಾಲುಸಾಲಲಿ ಮನೆಯಲಿ
ಬೊಂಬೆಬಾಗಿನ ತಪ್ಪದಾರಿಗು ಎಳೆಯ ಮಕ್ಕಳ ಕೈಯಲಿ
ಕಳಶಪೂಜೆಯ ಮಾಡಿ ಮೆರೆವರು ಹೆಣ್ಣುಮಕ್ಕಳು ಮುದದಲಿ
ತೊಳಗಿ ಬೆಳಗುವ ಮಂಗಳಾರತಿ ನಿತ್ಯ ನಡೆವುದು ಗುಡಿಯಲಿ.

ನಾಡುನುಡಿಗಳ ಹಬ್ಬವೋ ಇದು ಏಳಿರೆಲ್ಲರು ಏಳಿರಿ
ಬೀಡುಬೀಡಿಗು ಭಾಗ್ಯ ಬಂದಿದೆ ತಳಿರತೋರಣ ಕಟ್ಟಿರಿ
ಅಮಿತ ಹರುಷಕೆ ಸತತ ಸಾಧನ ಹಬ್ಬವೆಂಬುದನರಿಯುತ
ನಿಮಿಷವಾದರು ನಗುತ ಬಾಳುವ ಮನದ ಮಲಿನವ ಕಳೆಯುತ.

ನಾಡ ಕಟ್ಟಿದ ವೀರ ಧೀರರ ಕೆಚ್ಚು ಸಾರಲಿ ತೋಳಿಗೆ
ಹಾಡ ಹಾಡಿದ ಕವಿವರೇಣ್ಯರ ನುತಿಸಿ ನಲಿಯಲಿ ನಾಲಿಗೆ

ಶಿಲ್ಪವೋ, ಸಂಗೀತವೋ, ಸಲೆ ಲಲಿತಕಲೆಗಳ ನಾಡಿದು
ಕಲ್ಪಕಲ್ಪವೆ ಕಳೆದುಹೋದರು ಕಳೆಯು ಎಂದಿಗು ಕುಂದದು.

ದಿಗ್ದಿಗಂತಕು ದಾರಿ ಬೆಳೆಸಿದೆ ಮಲೆಯ ಸಾಲಿನ ತೋರಣ!
ಮುಗ್ಧಭಾವದಿ ಮುಂದೆ ಸಾಗಿದೆ ಸಲಿಲ ಲೀಲೆಯ ನರ್ತನ!
ಮೊಲ್ಲೆ, ಮಲ್ಲಿಗೆ, ಜಾಜಿ, ಸಂಪಗೆ, ಬಣ್ಣಬಣ್ಣದ ಹೂಗಳು!
ಎಲ್ಲಿ ನೋಡಲಿ ತೆಂಗು ಅಡಕೆಯ ಪಚ್ಚೆಪಯಿರಿನ ಬೆಳೆಗಳು!

ಅಭಯವೀಯುವ ಉದಯಕಾಲವನೆಂತು ಬಣ್ಣಿಸಿ ತಣಿಯಲಿ?
ಶುಭವ ಬೀರುತ ಕಣ್ಣ ತೆರೆವುದು ಹಕ್ಕಿಬಳಗದ ಉಲಿಯಲಿ.
ದಿವಸದಂತ್ಯವೊ ದಿವ್ಯವೆನಿಸಿದೆ, ಇರದು ಬೇರೆಯ ಹೋಲಿಕೆ.
ತವರುನಾಡಿನ ಹಬ್ಬಕೀ ದಿನ ಕಬ್ಬವೇ ಕವಿಕಾಣಿಕೆ!

ಇಂಥ ಹಬ್ಬವೆ ನೂರು ಸಾರಲಿ, ಊರು ಕೇರಿಯು ತಣಿಯಲಿ
ಪಂಥ ಹೂಡುತ ಜನರು ಸೇರಲಿ, ಒಲುಮೆ ನೇಹವು ಬೆಳೆಯಲಿ
ವರುಷವರುಷಕು ಹೆಚ್ಚುಹೆಚ್ಚಲಿ ನಾಡಹಬ್ಬದ ವೈಖರಿ
ಹರುಷದಿಂದಲಿ ನಾಡ ಬಾವುಟ ತೂಗಿ ತೊನೆಯಲಿ ಈ ಪರಿ.

ಗುರುಕೃಪೆ

ಕನ್ನಡದ ಕಲ್ಕೆಗಾತುರದಿಂದ ಎದೆ ಮಿಡಿಯೆ
ತುಂಬು ಹರಕೆಯನಿತ್ತು ಬೆಂಬಲದ ಕೈಸೀಡಿ
ಶಿಷ್ಯವಾತ್ಸಲ್ಯದಲಿ ಬಾಯ್ತುಂಬ ಕೊಂಡಾಡಿ
ಸರಿದಾರಿ ತೋರ್ದುದನು ನಾನೆಂದಿಗೂ ಮರೆಯೆ.
ಸವಿಮಮತೆ ವೈವೆತ್ತಿಹುದು ಮಾತುಮಾತಿನಲಿ.
ನಡೆ, ನುಡಿಗೆ ಕನ್ನಡಿಯ ಹಿಡಿದಂತೆ ಬಿಂಬಿಸಿರೆ
ಪೂರ್ಣ ಪಾಂಡಿತ್ಯದಲಿ ಘನಮೌನ ಶೋಭಿಸಿರೆ
ಸತ್ಯ ಸರಳತೆ ಬೆರೆತು ಬೆಳಗಿಹವು ಬಾಳಿನಲಿ.
ದೈವಕೃಪೆ ಗುರುಕೃಪಾರೂಪದಲಿ ವೈದೋರಿ
ಮಂದಬುದ್ಧಿಯ ತಿದ್ದಿ ಶುದ್ಧಿಗೊಳಿಸಿದುದಿಂತು
ಭಗ್ನಹೃದಯಕೆ ಭರವಸೆಯ ನೀಡಿದುದು ನಿಂತು.
ಗುರುಕರುಣೆಗೆಣೆಯಿಲ್ಲ ; ಸಕಲ ರಕ್ಷಣಕಾರಿ !
ಕನ್ನಡದ ಹಂಬಲಕೆ ಕೈಸೀರೆರೆದ ಗುರುವೆ
ಕೈಮುಗಿವೆ ಕೈಮುಗಿವೆ ನಿಮ್ಮಡಿಗಳಿಗೆ ಮಣಿವೆ.

"ಶ್ರೀ" ಅವರಿಗೆ

ನೀವಿಂದು ಜೀವಿಸಿರಬೇಕಿತ್ತು ಶ್ರೀಕಂಠ
  ಗುರುವರ್ಯ ! ಓ, ಕನ್ನಡದ ನುಡಿಯ ಆಚಾರ್ಯ !
  ಚಣಚಣವು ನಿಮ್ಮನೇ ನೆನೆಯುತಿಹೆ ಗುರುವರ್ಯ
ಉಗ್ರವಾಗುತಿರೆ ಕರ್ಣಾಟಕದ ಜನಕಂಠ !
ಕನ್ನಡದ ಗಡಿಗಾಗಿ, ಕನ್ನಡದ ನುಡಿಗಾಗಿ,
  ಕನ್ನಡದ ತಾಯ್ನಾಡ ಒಂದುಗೂಡಿಸಲೆಂದು
  ಹಗಲಿರುಳು ಒಂದೆ ಸಮ ಸಂಚರಿಸಿ ನೀವಂದು
ನುಡಿದ ಆ ನುಡಿಗುಡುಗು ಕೇಳಿಬರದೇ ವೊಳಗಿ ?
ನಾಡ ನಾಡಿಯ ಮಿಡಿವ ಕನ್ನಡದ ನುಡಿಯಿಂದು
  ಸಿಡಿಲು ಮಿಂಚುಗಳಂತೆ ಕನ್ನಡದ ಬಾನಿನಲಿ
  ಕೆರಳಿ ಕಿಡಿಗಾರುತಿದೆ, ಕೆಂಪೇರುತಿದೆ ಕನಲಿ
ತಾಯ್ನಾಡ ಬಿಡದಂತೆ ಇಂದೆ ಕಟ್ಟುವೆವು ಎಂದು !
  ಕನ್ನಡದ ಕುಲವೆಲ್ಲ ಒಂದೆ ಹಿರಿ ಸಂಸಾರ !
  ಕನ್ನಡದ ನೆಲವೆಲ್ಲ ಒಂದೆ ಭೂವಿಸ್ತಾರ !

ಗಾಂಧೀಜಿಯವರಿಗೆ

ಲೋಕಹಿತಸಾಧನೆಗೆ ಆತ್ಮಸುಖವನೆ ತೊರೆದು
ನಿಶಿತ ಸತ್ಯಾನ್ವೇಷಣೆಯ ಮಾರ್ಗದಲಿ ನಡೆದು
ನಿರುಪಮ ಅಹಿಂಸೆಯಿಂ ಬೆಂಬಿಡದೆ ಮುಂಬರಿದು
ಗುರಿಯ ಮುಟ್ಟಿದ ಧೀರ, ಮಣಿವೆವಿದೊ ಕೈಮುಗಿದು.
ದುಃಖ, ದೌರ್ಜನ್ಯ, ದಂಡನೆಗಳಂ ಲೆಕ್ಕಿಸದೆ
ನಗುನಗುತ ನಿರ್ಭೀತಿಯಿಂ ಎಲ್ಲವನು ಸಹಿಸಿ
ನಿರ್ಲಿಪ್ತ ಚಿತ್ತದಿಂ ಸರಳಜೀವನ ನಡೆಸಿ
ಜ್ಯೋತಿಸಾದೃಶ್ಯದಿಂ ಚಿರ ಬೆಳಗುತಿಹೆ ಬಿಡದೆ.
ಜಾತಿ, ಮತ, ಪಂಥಗಳ ಭೇದಭಾವವನರಿಯೆ
ಅಣ್ಣತಮ್ಮದಿರೆಂದು, ಅಕ್ಕತಂಗಿಯರೆಂದು
ಊರೂರೆ ಬಂಧುಬಳಗಗಳಾಗೆ ನಿನಗಿಂದು
ಗಳಿಸಿರುವೆ ವಿಶ್ವಸೌಹಾರ್ದವನು ಮನ ನಲಿಯೆ.
ಶಾಂತಿಭಾವಸ್ಥಿಮಿತಮತಿ ಅಪ್ರತಿಮ ಮೂರ್ತಿ
ನಿನ್ನಮಲಜೀವನವೆ ಭಾರತಾಂಬೆಗೆ ಸ್ಫೂರ್ತಿ !

ಸ್ವಾತಂತ್ರ್ಯೋದಯ

ಭವ್ಯಭಾರತದ ಭಾಗ್ಯೋದಯದ ಸಿರಿ ಮೂಡಿ
ಸ್ವಾತಂತ್ರ್ಯಸಂದೇಶವನು ಸುತ್ತಲೂ ಸಾರಿ
ಮನೆಮನೆಗು ಹಬ್ಬವೆನೆ ಹೊಸ ವೈಭವವ ಬೀರಿ
ಹೊತ್ತು ಮೂಡಿದುದಿಂದು ತುಂಬು ಭರವಸೆ ನೀಡಿ.
ನಿನ್ನ ಮೇಲ್ಮೆಗೆ ನೀನೆ ಹೊಣೆ ಇನ್ನು ಓ, ಗೆಳೆಯ !
ಅನ್ಯರಾಶ್ರಯವಿಲ್ಲ ; ಶಂಕೆ ಭೀತಿಗಳಿಲ್ಲ ;
ಕೀಳು ಮೇಲುಗಳಿಲ್ಲ, ಒಂದೆ ನಾಡ ಜನವೆಲ್ಲ.
ಇಂದು ಬಂದಿದೆ ಮತ್ತೆ ದೀಕ್ಷೆತಾಳುವ ಸಮಯ !
ಆಳುಬಾಳಿಗೆ ಸಿಕ್ಕಿ ರಕ್ತ ಕಾರಿದರಂದು
ದಾಸ್ಯಶೃಂಖಲೆಯಲ್ಲಿ ಜೀವ ತೆತ್ತರು ಹಲರು
ಧ್ವಜವ ಬಿಡದೊಲು ಕಾಯ್ದು ಅಸುವ ತೊರೆದರು ಕೆಲರು
ಮರೆಯದೊಲು ಎಲ್ಲರನು ನೆನೆ ಇಂದು " ಜೈ " ಎಂದು.
ಕಲಿಯಾಗು, ಅನುವಾಗು, ಭಾರತಾಂಬೆಯ ಪುತ್ರ
ನಿನ್ನ ಕೈಲಿಹುದಿಂದು ಭರತಖಂಡದ ಸೂತ್ರ !

———

ದೇಶಭಕ್ತ

ದೇಶಭಕ್ತನೆ ಇಂದು ಈಶಭಕ್ತನು ಎಮಗೆ
ವೇಷಭಕ್ತರ ಸೇವೆಯದು ಸಾಕುಸಾಕಾಯ್ತು !
ಭಾರತಾಂಬೆಯ ಭಾಗ್ಯ ತಲೆಯೆತ್ತುತಿದೆ ನೋಡು
ಧೀರವೀರರಿಗಿಂದು ಸುಸ್ವಾಗತವ ನೀಡು !

ವರುಷ ವರುಷದ ದಾಸ್ಯ ಆಲಸ್ಯವೆನಿಸಿತ್ತು !
ಅಲ್ಪತನ, ಕುಹಕತನ, ದಟ್ಟದಾರಿದ್ರ್ಯದಲಿ
ಅಜ್ಞಾನ, ಅವಿವೇಕ, ಮಲೆತ ಮಾತ್ಸರ್ಯದಲಿ
ದೇಶದೇಶವೆ ನವೆದು ದಿಕ್ಕುಗಾಣದೆಹೋಯ್ತು !
ಸ್ವಾತಂತ್ರ್ಯಸುರಭಿಯಲಿ ಮರಳಿ ಚೇತನಗೊಂಡು
ಮೆಲುಮೆಲನೆ ಕಣ್ತೆರೆದು ಮೈಕೊಡಹುತಿದೆ ನಾಡು.
ಹುರುಪು ಹುಮ್ಮಸವಿತ್ತು ಹರುಷದೊಸಗೆಯ ಬೀರಿ,
ಕೈಹಿಡಿದು ಕರೆದೊಯ್ಯೆ ಕೆಚ್ಚೆದೆಯ ಕಲಿ ಬೇಕು !
ಬತ್ತಿಹೋಗಿಹ ಧೈರ್ಯ ಮತ್ತೆ ಉದ್ಭವಿಪಂತೆ,
ನಮ್ಮದೆನ್ನುವ ಹೆಮ್ಮೆ ಇನ್ನೊಮ್ಮೆ ಮೆರೆವಂತೆ,
ನಾಡಗುಡಿಯನು ಎತ್ತಿ ಬಾಂದಳದಿ ಹಿಡಿವಂತೆ,
ದಿಕ್ಕು ಬಿರಿವಂದದಲಿ " ಜೈ " ಎಂಬ ಘೋಷವನು
ಘೋಷಿಸಲು ಹೃದಯದಲಿ ಸ್ಫೂರ್ತಿ ಮೈದಳೆವಂತೆ,
ನಾಡಿನೇಳಿಗೆಗಾಗಿ ನೂರಾರು ಜನ ನಿಂತು
ನಗುನಗುತ ದುಡಿವಂತೆ, ಎಲ್ಲರನು ಮನಸೆಳೆವ
ದೇಶಭಕ್ತನೆ ಇಂದು ನಮ್ಮ ಸಲಹುವ ಬಂಧು !

ಕೋಟಿಗಟ್ಟಲೆ ಮಂದಿ ಕಷ್ಟದಲಿ ಕಳವಳಿಸಿ
ಕಂಗೆಟ್ಟು ನಿಂತಿರಲು, ಬೆಟ್ಟದಂತಹ ಕಷ್ಟ
ಅಡ್ಡಗಟ್ಟಿರೆ ಮುಂದೆ, ಎಲ್ಲ ಹೊಣೆಯನು ಹೊತ್ತು

ರಾಜ್ಯಸೂತ್ರವ ಹಿಡಿದು ನಗುನಗುತ ದುಡಿಯುತಿಹ
ನಮ್ಮ ನಾಯಕ ನೆಹರುವಿಗೆ ಕೈಮುಗಿವ ಬನ್ನಿ!

ಸ್ವಾತಂತ್ರ್ಯಮಥನದಲಿ ಶಾಂತಿಸಂಗ್ರಾಮದಲಿ
ತಂದೆತಾಯಿಗಳೆನದೆ, ಬಂಧುಬಳಗಗಳೆನದೆ,
ಸಂಸಾರಸರ್ವಸ್ವವನೆ ದೇಶಸೇವೆಗೆ ಎರೆದು
ಸುಖ, ಭೋಗ, ಭಾಗ್ಯಗಳ ತೃಣಕಿಂತ ಕಡೆಗೆಯ್ದು
ತ್ಯಾಗದೀಪ್ತಿಯನಂದು ಹಚ್ಚಿಸಲು, ಆ ತೇಜ,
ದಿವ್ಯಕಾಂತಿಯು ಬೀರಿ ನಾಡ ಬೆಳಗಿದೆ ಇಂದು!
ನೂರು ತಪಗಳ ಓಜ ಮೆರೆಯುತಿದೆ ಮುಖದಲ್ಲಿ!
ತೊಟ್ಟ ಹಟವನು ಗೆಲುವ ನಿಷ್ಠೆಯಿದೆ ನಡೆಯಲ್ಲಿ!
ಉತ್ಸಾಹವುಕ್ಕುವುದು ಬಗೆ ಸೆಳೆವ ನಗೆಯಲ್ಲಿ!
ಅತುಳ ವಿದ್ವನ್ಮಣಿಯೆ! ಭಾರತದ ಕಣ್ಮಣಿಯೆ!
" ನಿನ್ನ ಆಕೃತಿ ಕಂಡು ಬಾಳು ಸಾರ್ಥಕವಾಯ್ತು
ನಿನ್ನ ನುಡಿಯನು ಕೇಳಿ ಕಿವಿಗೆ ಸೈಪುಂಟಾಯ್ತು"
ಎಂದು ಎದೆಯುಬ್ಬಿಹುದು ಲೋಕಲೋಕವೆ ಮೆಚ್ಚಿ!
ಸೆರೆಮನೆಯ ವಾಸವನು ಸಿರಿಯೆಂದು ಭಾವಿಸಿಹೆ
ಆ ತಾತ ಗಾಂಧಿಯನು ಗುರುವೆಂದು ಎಣಿಸಿರುವೆ
ಹಿಂದುಳಿದ ದೇಶವನು ಮುಂದೆ ತರುವೆನು ಎಂದು
ಪಣ ತೊಟ್ಟು ಹೊರಟಿರುವೆ! ಓರೆ, ಕೋರೆಗಳಿಲ್ಲ;
ಕಪಟ ಕಲ್ಮಷವಿಲ್ಲ; ಸಂಕುಚಿತ ಮನವಿಲ್ಲ!
ಶಾಂತಿ, ಸಂಯಮ, ನಿಯಮ, ಏಕಾಂತವಾಸದಲಿ
ಉನ್ನತೋದ್ದೇಶದಲಿ ನಿತ್ಯನಿತ್ಯವು ಗೆಯ್ದು
ಸ್ವಾತಂತ್ರ್ಯಸಾಧನೆಯ ಅತ್ಯುಗ್ರ ನೋಂಪಿಯಲಿ
ಬಾಳು ಬೆಳಕಾಯ್ತು! ಭಾರತಕೆ ಮುಂಬೆಳಗಾಯ್ತು!

ಮಾನವನ ಮಾನವತ್ವವೆ ಘನಿಸಿ ತಲೆಯೆತ್ತಿ
ಮೆರೆವಂತೆ, ಕರುಣೆ ಕೈನೀಡಿ ಭೂಲೋಕವನೆ

ಕರೆವಂತೆ, ಹೃದಯದೌದಾರ್ಯ ಹೂಬಿಡುವಂತೆ,
ಸತ್ಯವನು ಸಾರಿಹೇಳುವ ಕೆಚ್ಚು ಮತ್ತೊಮ್ಮೆ
ಸಾಕಾರವೆತ್ತಂತೆ, ಭರತವರ್ಷದ ಪುಣ್ಯ
ಪುರುಷರೂಪವನಾಂತು ಭೂಪ್ರದಕ್ಷಿಣೆಗೆಯ್ದು
ಸ್ನೇಹ, ಸೌಹಾರ್ದ, ಸೌಜನ್ಯ ಸರಳಜೀವನದ
ಶಾಂತಿಮಂತ್ರವ ಪುನಃ ಬೋಧಿಸುವ ಗುರುವಂತೆ
ಸ್ಫೂರ್ತಿಯಿತ್ತಿಹುದೆಮಗೆ ನಮ್ಮ ನಾಯಕಮೂರ್ತಿ!
ತಾಯ್ನಾಡ ಧವಳ ಕೀರ್ತಿಯ ಮೆರೆಯಿಸುವ ಮೂರ್ತಿ!!

ಓ, ತಾಯಿ, ಭಾರತಿಯೆ! ಮುಕ್ತಕಂಠದಲಿಂದು
ಸ್ವಾತಂತ್ರ್ಯಜಾಹ್ನವಿಯ ತೀರ್ಥೋದಕದಿ ಮಿಂದು
ಎಲ್ಲರೂ ಕೈಮುಗಿದು ಕೇಳುತಿರುವೆವು ನಿಂದು
ನಮ್ಮ ನಾಯಕರತ್ನವನು ಸಲಹು ಸಲಹೆಂದು.

ನಾಡ ಹಾಡು

ನಾಡ ಕಟ್ಟುವ ಕಾಲ ಬಂದಿದೆ!
ಮನೆಯು ಹೊಸಲಿಗೆ ಬಂದಿದೆ!
ಹಾಡ ಕಟ್ಟುವ ಬಯಕೆ ಬಂದಿದೆ!
ಮಾತು ಬಾಯಿಗೆ ಬಂದಿದೆ!
ದೇಶದೇಶವೆ ಚಕಿತಗೊಂಡಿದೆ
ಪುಳಕಗೊಂಡಿದೆ ಈ ದಿನ!
ಏನು ಮಾಡಲಿ? ಏನು ಮಾಡಲಿ?
ಎನುತಲಿರುವುದು ತನುಮನ.

ಮೊದಲು ಕೈಮುಗಿ ತಾತ ಗಾಂಧಿಗೆ ದಾಸ್ಯ ಹರಿಸಿದ ದಾತಗೆ!
ಮತ್ತೆ ಕೈಮುಗಿ ಜೀವ ನೀಡಿದ ದೇಶಭಕ್ತರ ವೃಂದಕೆ!
ಇತ್ತ ಕೈಮುಗಿ ಹೊಣೆಯ ಹೊತ್ತಿಹ ನಮ್ಮ ಸಲಹುವ ಮಂದಿಗೆ!
ತಾಯಿ ಭಾರತಿಗಿಂದು ಆರತಿ ಎತ್ತಿ ಬನ್ನಿರಿ ಒಟ್ಟಿಗೆ!

ನಮ್ಮದೆನ್ನುವ ಹೆಮ್ಮೆ ಮೂಡಲಿ ಹುರುಪು ಹುಮ್ಮಸ ಮೊಳೆಯಲಿ
ಸುಮ್ಮಗಾಗುವ ಕಾಲ ಮುಗಿಯಿತು ಎಲ್ಲ ಬನ್ನಿರಿ ನಗುತಲಿ
ಬಡವ-ಬಲ್ಲಿದ ದೀನ-ಧನಿಕರು ಎಂಬ ಮಾತದು ಸಲ್ಲದು
ನಾಡ ಕಟ್ಟುವ ಇಂಥ ಸಮಯದಿ ಒಡಕು ಮಾತದು ಒಪ್ಪದು.

ಕಿನಿಸು ಮುನಿಸುಗಳಾವುದುಳಿಯದೆ ಗೆಳೆಯರಂದದಿ ಬನ್ನಿರಿ
ಹಳೆಯ ಹೊನ್ನಲಿ ಹೊಸತು ರನ್ನವನೊಂದುಗೂಡಿಸಿ ತನ್ನಿರಿ
ಧ್ವಜವನೇರಿಸಿ ಭುಜವ ತಟ್ಟಿರಿ ಭಾಪು ಭಾಪುರೆ ಎನ್ನಿರಿ
ಒಂದೆ ಕೊರಲಲಿ ವಂದೆಮಾತರಮೆಂದು ಹಿಗ್ಗುತ ಹಾಡಿರಿ.

" ಯಾವ ದೇಶಕು ಹಿಂದೆ ಉಳಿಯೆವು
ಬೇರೆ ದೇಶವನೊಲ್ಲೆವು!

ಶಾಂತಿಮಂತ್ರವ ಮರೆಯಲಾರೆವು
ಕಲಿಗಳಾಗದೆ ಉಳಿಯೆವು!
ಧರ್ಮಚಕ್ರದ ಬಲ್ಪಿನಿಂದಲಿ
ಮುಂದು ಮುಂದಕೆ ಬರುವೆವು!"
ಎಂದು ಈ ದಿನ ದೀಕ್ಷೆತಾಳುವ
ಬೇರೆ ದಿನವನು ಕಾಣೆವು.

ಕುಹಕ, ಕುತ್ಸಿತ, ಕಟಕಿ, ನಿಂದೆಯ ನಂಜುನುಡಿಗಳು ಸಲ್ಲವು
ಬರಿಯ ಮಾತಲಿ ಮರುಳುಗೊಳಿಸುತ ಕಳೆವ ಕಾಲವಿದಲ್ಲವು.
ಹಳೆಯ ನಾಡಿಗೆ ಎಳೆಯ ಹರೆಯವು ಮತ್ತೆ ಸಾರುವ ತೆರದಲಿ
ನಾಡಿನಾಡಿಗಳಲ್ಲಿ ಚೇತನ ತುಂಬಿ ತುಳುಕುತ ಹರಿಯಲಿ.

ಪ್ರಜೆಗೆ ಪೂಜೆಯ ಪದವಿ ಸಂದಿದೆ ಕಾಲಮಹಿಮೆಯ ಬಲದಲಿ
ರಾಜ್ಯದೇಳಿಗೆ ಹುದುಗಿನಿಂದಿದೆ ಜನರ ಮೇಲಿಹ ಹೊಣೆಯಲಿ
ಎಂಥ ಪುಣ್ಯದ ಗಳಿಗೆ ಈ ದಿನ ನಮ್ಮ ನಾಡಿನ ಕತೆಯಲಿ
ಕಾಲಕಾಲಕು ಇದುವೆ ನಮ್ಮನು ಕೈಯ ನೀಡುತ ನಡೆಸಲಿ.

ನೂರು ತೆರದಲಿ ನೂರು ಜನಗಳು ಒಂದೆ ಬಗೆಯಲಿ ದುಡಿಯಲು
ಬಲ್ಲಬಲ್ಲವರೆಲ್ಲ ತಪ್ಪದೆ ಒಪ್ಪಿ ಒಮ್ಮತವೀಯಲು
ನೆನೆದ ತೆರದಲಿ ದೇಶದೇಳಿಗೆ ಆಗಲಾರದೆ ಇರುವುದೆ?
ಹೊಟ್ಟೆ ತುಂಬಲು ಊಟ ದೊರೆಯದೆ? ಬಟ್ಟೆ ಮೈಯನು ಮುಚ್ಚದೆ?

ಹಿರಿಯರಾಗಲಿ ಕಿರಿಯರಾಗಲಿ ಒಂದೆ ಮನದಲಿ ನೆನೆಯಿರಿ
ಏನು ಮಾಡಲಿ? ಏನು ಮಾಡಲಿ? ಎಂದು ಈ ದಿನ ಬಗೆಯಿರಿ.
ನಿಂತ ನಿಲುವಲೆ, ಕುಳಿತ ಕಡೆಯಲೆ, ಕೇಳಿಕೊಳ್ಳಿರಿ ಮರೆಯದೆ
ಹಿಡಿದ ಕೆಲಸವ ಮೆಚ್ಚಿ ಮಾಡಲು ಬದುಕು ಸಾರ್ಥಕವಾಗದೆ?

ಲೋಕಲೋಕವೆ ನೋಡುತಿರುವುದು ನಾಡ ಕಟ್ಟುವ ನಮ್ಮನು
ಒಲವಿನಿಂದಲಿ ಗೆಲುವಿನಿಂದಲಿ ಮುಂದೆ ನಡೆದಿಹ ನಮ್ಮನು.

ಸೂರ್ಯ, ಚಂದಿರ ತಾರೆ ಮಂಡಲ
ಗಿರಿ ಸರೋವರ ಹರಸಲಿ!
ದಿವಿಜವೃಂದಕು ದಿಟ್ಟ ಬಡಿವೊಲು
ಮನುಜವೃಂದವು ಬೆಳೆಯಲಿ!

ಉತ್ಸಾಹ

ಉಕ್ಕುಕ್ಕಲಿ ಉತ್ಸಾಹವು ಎದೆಯುಬ್ಬಿಸಿ ಇಂದು
ಅಕ್ಕರೆಯಲಿ ಮನ ಬೆಸೆಯಲಿ ಉತ್ಸಾಹದಿ ಮಿಂದು!

ಗುಡುಗಾಡಲಿ ಉಡುಗದ ಉತ್ಸಾಹವು ನೆರೆಯಂತೆ
ಹುಡುಗರ ಹುರಿದುಂಬಿಸಿ ಕರೆಕರೆಯಲಿ ಬಿಡದಂತೆ.

ಮುದಿಗಣ್ಗಳ ಮನ ಮೆಚ್ಚಿಸಿ ತಲೆದೂಗಿಸಿ ಬರಲಿ
ಬೆದರಿಕೆಯನು ಬೆನ್ನಟ್ಟುತ ಹೆಸರಳಿಸುತ ಬರಲಿ.

ಪಾತಾಳದ ಕತ್ತಲೆಯಲಿ ಕೈಬೀಸುತ ನಡೆವ
ಮಿತಿಯಿಲ್ಲದ ಆಕಾಶದಲೀಜಾಡುತ ಮೆರೆವ.

ಕಡಲಲೆಗಳ ನಿರ್ಘೋಷವೆ ಜಯಘೋಷದ ದನಿಯು
ಗಿಡಮರಗಳ ತೂಗಾಟವೆ ಬೀಸುವ ಸೀಗುರಿಯು.

ಕಷ್ಟದ ಮುಖ ಕಪ್ಪಿಡುವೊಲು ಮೈಬೆವರನು ಸುರಿದು
ಇಷ್ಟದ ಸಿರಿ ಬೊಕ್ಕಸವನು ಮಿಗೆ ಬೆಳಸುವ ದುಡಿದು.

ಹೀಯಾಳಿಸಿ ನಕ್ಕವರಿಗೆ ಅಚ್ಚರಿಯನು ಬೀರಿ
ಸೈಯೆನ್ನಿಸಿ ಮೆರೆಯುವ ಸಾಮರ್ಥ್ಯದ ಹಯವೇರಿ.

ನಡೆ ಸಾಗಲಿ, ಪಡೆ ಸಾಗಲಿ, ಗುರಿ ಮುಟ್ಟುವವರೆಗು
ಎಡೆಬಿಡದೊಲು ಮುಂಬರಿಯುವ ಉಸಿರಾಡುವವರೆಗು.

ಉತ್ಸಾಹವೆ ಉಸಿರಾಗಲಿ ನವಯುಗದಲಿ ನಮಗೆ
ಉತ್ಸಾಹದ ಸಾಹಸದಲಿ ಬೆಳಕಾಗಲಿ ಇಳೆಗೆ.

ಎದೆಯೆತ್ತರ ಬೆಳೆಬೆಳೆಯಲಿ ತೆನೆ ತೂಗಲಿ ತುಂಬಿ
ಸೊದೆಗರೆಯಲಿ, ಹೊನ್ನಿನ ಬೆಳೆ ತುಳುಕಲಿ ಕೈತುಂಬಿ.

ರವಿ, ಚಂದಿರ, ತಾರೆಗಳನು ಆಳುವ ಬಲ ಬಗಲಿ
ದಿವಿಗಿಂತಲು ಬುವಿ ಹಿರಿದೆನಿಸಲಿ ನಡೆನುಡಿಗಳಲಿ.

ಸೌಜನ್ಯಕೆ ಕಳೆಯೇರಲಿ ಸೌಹಾರ್ದದಿ ಬೆರೆತು
ನಿಜಧರ್ಮಕೆ ತಲೆಬಾಗುವ ನಿರ್ದಯವನು ಮರೆತು.

ಉತ್ಸಾಹದ ಉತ್ಸವದಲಿ ಇಳೆ ತಣಿಯಲಿ ಇಂದು
ಉತ್ಸಾಹಕೆ ಉತ್ಸಾಹವೆ ಮೆರೆಯಲಿ ಎಂದೆಂದು !

ಮೌನ

ಮಾತಿಗಿಂತ ಮೌನ ಹೆಚ್ಚು
ಮಾತಿಗುಂಟು ಇತಿಮಿತಿ
ಮೌನಕಿಲ್ಲ ಪರಿಮಿತಿ !

ನಿತ್ಯ ನಿತ್ಯ ಮೂಡಿಬರುವ
ಸೂರ್ಯಚಂದ್ರರಿಬ್ಬರು
ಸದ್ದೆ ಇರದೆ ಮೆರೆವರು.

ನೂರು ಬಗೆಯ ಪುಷ್ಪರಾಶಿ
ಸದ್ದೆ ಇರದೆ ಬಿರಿವುದು
ದಿವ್ಯ ಗಂಧವೆರೆವುದು.

ಕಾಲನದಿಯ ಗೆಜ್ಜೆದನಿಯು
ಕೇಳಲಳವೆ ಜಗದಲಿ
ಸಾಗುತಿರಲು ಭರದಲಿ !

ಕವಿಯು ಮೌನ, ಋಷಿಯು ಮೌನ,
ಗಿರಿಯು ಮೌನ, ಬಲು ಘನ
ಗಾಢ ಗೂಢ ಚಿಂತನ !

ದೃಷ್ಟಿದೂರ ಸೃಷ್ಟಿಕರ್ತ,
ಮಾತೊ ಕಿವಿಗೆ ಕೇಳದು
ಗೈಮೆಯೊಂದೆ ಕಾಂಬುದು !

ಮಾತು ಅಲ್ಪ ; ಮೌನ ಕಲ್ಪ !
ಮೌನ ಬೆಲೆಗೆ ಸಿಲುಕದು
ಮೌನ ಬಗೆಗೆ ನಿಲುಕದು.

ಚಿರಂಜೀವಿ

ಸ್ಮರಿಸದಿರು ನೀನೆನಗೆ ಓ, ನಲ್ಲೆ, ಕೈಹಿಡಿದು
ವರುಷ ವರುಷಗಳು ಉರುಳಿದುವು ಎಂದು.
ನಿನ್ನೆ ಮೊನ್ನೆಯೊ ಏನೊ ನಿನ್ನ ನೋಡಿದವೊಲಿಹುದು
ಒಲುಮೆ ಹೊಚ್ಚ ಹೊಸದಾಗಿರಲು ಇಂದು!

ದೇಹ ಸವೆದೊಡೆ ಏನು, ರೂಪು ನಶಿಸಿದೊಡೇನು,
ಒಲುಮೆ ಯೌವನವು; ಮುಪ್ಪಿಲ್ಲ ಕೇಳು.
ದಿನದಿನವು ದಾಂಪತ್ಯ ನೀಡುತಿರೆ ಸವಿಜೇನು
ಕಷ್ಟನಷ್ಟಗಳ ಹೊರೆಯಲ್ಲ ಬಾಳು!

ಬಾಳು

ಬಾಳು ಹೊರೆಯೆನಬೇಡ
ಹಾಳು ಬಾಳೆನಬೇಡ
  ತಾಳು, ತಾಳು !
ಜೀವಜೀವದೊಳಿಂದು
ದೇವ ನೆಲಸಿಹನೆಂದು
  ತಿಳಿದು ಬಾಳು !

ದೈವಸೃಷ್ಟಿಯಲೆಲ್ಲ
ವ್ಯರ್ಥವೆಂಬುದೆ ಇಲ್ಲ
  ಅರ್ಥವಿಹುದು !
ಜಡವು ಚೇತನವೆಂದು
ಭೇದವೆಣಿಸದಿರಿಂದು
  ಸಾರ್ಥವಹುದು !

ನಿಂತಲ್ಲೆ ನಗುನಗುತ
  ತೂಗುವುದು ತರುವು !
ಕಲ್ಲೆದೆಯನರಳಿಸುತ
  ಕರೆಯುವುದು ಗಿರಿಯು !
ಕಂಪನೆರೆಯುವ ಹೂವು
  ತಂಪನೀಯುವುದು !
ನದಿಯ ಮಂಜುಳರಾವ
  ಮನವ ಮರೆಸುವುದು !

ಕ್ರಿಮಿ, ಕೀಟ, ಅಣುಜೀವಿ,
ನೂರು ಬಗೆ ಇಹಜೀವಿ
  ಇರುವುವಿಲ್ಲಿ !

ಬದುಕಿ ಬಾಳ್ವವು ಹಲವು
ಉರುಳಿ ಸಾಯ್ವವು ಕೆಲವು
   ನಿಲ್ಲದಿಲ್ಲಿ !

ನರನ ಬಾಳೀ ಬಾಳು
   ಮುಕುಟವಂತೆ !
ಪರಿಪೂರ್ಣವೀ ಬಾಳು
   ಗಣ್ಯವಂತೆ !
ನೀನೊಬ್ಬ ಧೀಮಂತ
ನೀನೆ ಬಲು ಶ್ರೀಮಂತ
   ಏಕೆ ಚಿಂತೆ ?

ದುಡಿವ ಹಟ ತೊಡು ಮುನ್ನ
ಅದುವೆ ಬದುಕಿಗೆ ಚೆನ್ನ !
ಕುಳಿತು ಮೈಮುರಿಯದಿರು
ಕೊಳೆತು ಕೃಶವಾಗದಿರು
   ಏಳು, ಏಳು !
ಈ ಬಾಳು ತೃಣವಲ್ಲ !
ತೃಣಕಿಂತ ಕಡೆಯಲ್ಲ !
ತೃಣವು ಸಹ ಕಿರಿದಲ್ಲ !
ದೈವ ಅರಿಯದುದಿಲ್ಲ
   ಕೇಳು ಕೇಳು !

ಕೆಚ್ಚೆದೆಯ ಕಲಿಯಾಗು
   ಬಿಡದೆ ದಯೆಯ !
ಸಾಗು ಮುಂದಕೆ ಸಾಗು
   ಅರಿತು ಗುರಿಯ !

ಹುಟ್ಟಿನಲಿ ಮಗುವಾಗಿ
ಬಾಳಿನಲಿ ಬೆಳಕಾಗಿ
ಹಿರಿತನಕೆ ಹೆಸರಾಗಿ
ಬಾಳು ಗೆಳೆಯ !

ಸಕಲ ಸಾಧನಕೆಲ್ಲ
ಬದುಕೆ ಸೋಪಾನ !
ಇದನು ಮೀರಿಹುದಿಲ್ಲ
ಇದುವೆ ಸನ್ಮಾನ !

ಪಟ್ಟಣ

ಏನು ಗಲಿಬಿಲಿ ಏನು ಗದ್ದಲ
ಏನು ಹೊಲಸೀ ಪಟ್ಟಣ !
ಏನು ಗಜಿಬಿಜಿ, ನೂಕುನುಗ್ಗಲು
ಇದುವೆ ಸಂಸ್ಕೃತಿಲಕ್ಷಣ ?

ಯಂತ್ರದೊಂದಿಗೆ ಯಂತ್ರವಾಗುತ
ನಿತ್ಯ ನಡೆದಿದೆ ಜೀವನ
ಬಿಡುವೆ ಇಲ್ಲದ ತೆರದಿ ದುಡಿಯುತ
ಎಂತೊ ಸಾಗಿದೆ ದಿನದಿನ !

ಹಾಳುಮೂಳನು ಕೂಳು ಎಂಬರು
ತಂದುಕೊಡುವರು ತಿನ್ನಲು
ಲಕ್ಷ್ಯವಿಲ್ಲದೆ ದುಡ್ಡು ಕೊಡುವರು
ತಂದುಕೊಡುತಿರೆ ತಂಗಳು.

ಕಳ್ಳತನದಲೊ, ಸುಳ್ಳುತನದಲೊ,
ಅಂತು ಹೊಟ್ಟೆಯ ಹೊರೆವರು.
ಮೋಸ, ಕೃತ್ರಿಮ, ಹಿಂಸೆ, ಕೋಟಲೆ,
ಯಾವುದೊಂದನು ಬಗೆಯರು.

ಧರ್ಮ, ನೀತಿಯ ಹೆಸರು ಅಳಿಸಿತು
ಎಂದೊ ಹೋಯಿತು ನಂಬುಗೆ.
ದುಡ್ಡುಕಾಸಿನ ದಾಹ ಹೆಚ್ಚಿತು
ಮಿತಿಯೆ ಇಲ್ಲವು ಆಸ್ತಿಗೆ.

ಸಾಹುಕಾರರ ಸಿರಿಯು ಹೆಚ್ಚಿತು
ಲಕ್ಷ ಕೋಟಿಯು ಎನ್ನದೆ.

ಊರು ಕೇರಿಯು ಅವರದಾಯಿತು
  ಕಂಡು ಕೇಳುವರಿಲ್ಲದೆ.

ಬಡವ ದಿನದಿನ ಬಡವನಾದನು
  ನರಕವಾಯಿತು ಜೀವನ.
ಏನು ಮಾಡಲು ತೋರದಾದನು
  ಬದುಕೆ ಅವನಿಗೆ ಬಂಧನ !

ಕಣಜ ಕಣಜವೆ ತುಂಬಿಕೊಂಡಿದೆ
  ಸಾಹುಕಾರರ ಮನೆಯಲಿ
ತುತ್ತುಕೂಳಿಗೆ ದಿಕ್ಕುಗಾಣದೆ
  ದೀನರಲೆವರು ಹಸಿವಲಿ.

ಸಿರಿಗು ಬಡತನಕೊಂದೆ ಸಮನೆ
  ನಡೆಯುತಿರುವುದು ಸ್ಪರ್ಧೆಯು
ತಿಂದುಹಾಕಲು ಒಂದನೊಂದನೆ
  ಕಾಯುತಿರುವುದು ನಿತ್ಯವು.

ರಂಗು ರಂಗಿನ ಬೆರಗಿನಾಟಕೆ
  ಮನವನಿತ್ತರು ಎಲ್ಲರು.
ಜಂಭ, ಡಂಭಕೆ, ಮೇಲುನೋಟಕೆ
  ಬೆಲೆಯ ಕೊಟ್ಟರು ಹಲವರು.

ಪ್ರೀತಿ, ಅಕ್ಕರೆ, ಮಮತೆ, ಮರುಕವೆ—
  ಒಂದು ಕಾಣದು ಜನರಲಿ
ಗುಣಕು, ವಿದ್ಯೆಗು ಪೂಜ್ಯಭಾವವೆ
  ಇಲ್ಲವಾಯಿತು ಇವರಲಿ.

ಹೆಣ್ಣುತನವನೆ ಮರೆತು ನಡೆದಿದೆ
  ಹೆಣ್ಣುಮಕ್ಕಳ ಜಂಗುಳಿ

ಗಂಡುತನಕೂ ಸೊನ್ನೆಯಾಗಿದೆ
ಗಂಡುಮಕ್ಕಳ ನಡೆಯಲಿ.

ಏನು ಗಲಿಬಿಲಿ, ಏನು ಗದ್ದಲ,
ಏನು ಭೀಷಣ ಪಟ್ಟಣ!
ಏನು ಹೊಲಸಿದು ನೂಕುನುಗ್ಗಲು
ಇದುವೆ ಸಂಸ್ಕೃತಿಲಕ್ಷಣ ?

ಆರರೆ, ಎಂತಹ ಜೀವನ
ಶುದ್ಧ ಯಾಂತ್ರಿಕ ಜೀವನ !

ಮಲ್ಲಶಾಲೆ

೧

ಮನವಿದೊಂದು ಮಲ್ಲಶಾಲೆ!
ನಿತ್ಯ ನಿತ್ಯ ರಣದ ಲೀಲೆ!
ನನಗೆ ನಾನೆ ಒಂದು ಕಡೆ
ಆರು ಮಂದಿ ಎದುರುಗಡೆ!
ಹುದುಗಿ, ಬೆಳೆದು ನಿಂತರೋ
ಮುತ್ತಿಬಂದು ಹೊಕ್ಕರೋ
  ಅರಿಯೆ ನಾನು, ಅರಿಯೆನು.
  ಇದೋ ಹೋರುತಿರುವೆನು!

೨

ಕಾಮಭೂಪ ಕೈಯನೆತ್ತಿ
ದಂಡು ದಾಳಿ ಸುತ್ತ ಮುತ್ತಿ
ಬಿಲ್ಲು ಬಾಣ ಬಲ್ಲ ಜಾಣ
ಕೊಯ್ಯುತಿರುವನೆನ್ನ ಗೋಣ.
ನಿತ್ಯ ನಿತ್ಯ ಕಾಮಹೋಮ
ಸಾಗುತಿಹುದು, ರಾಮ! ರಾಮ!
ಹೊಯ್ದ ತುಪ್ಪ ಉರಿಗೆ ಮೆಚ್ಚು
ತಗ್ಗಲಳವೆ ಕಾಮಹುಚ್ಚು?
ಚಿತ್ತವೊಂದು ಗಾಣದೆತ್ತು
ತಿರುಗುತಿಹುದು ಸುತ್ತು ಸುತ್ತು.
ಮೊಟ್ಟಮೊದಲು ಹಿಗ್ಗು ಹಿಗ್ಗು
ಕಟ್ಟಕಡೆಗೆ ಬಹುದು ಸಿಗ್ಗು.
ಎಂಥ ಆಟ, ಎಂಥ ಕಾಟ

ಕಾಮಗೊಂದು ಗೊಂಬೆಯಾಟ
ಚಪಲನೆದೆಗೆ ಇಂಬಿದು!
ಶಕ್ತನೆದೆಗೆ ಅಂಬಿದು!

೩

ಉರಿಗು ಮೀರಿ ನಂಜು ಕಾರಿ
ನುಡಿಯು ಗುಡುಗು ಸಿಡಿಲು ತೋರಿ
ಕ್ರೋಧ ಕನಲಿ ಬರುತಿದೆ,
ಕೊಲ್ಲಲೆಳಸಿ ಬರುತಿದೆ.
ಎರಡು ಕಣ್ಣು ಕೆಂಡದುಂಡೆ
ಕೆಂಪು ಕುರುಳ ಹೊತ್ತ ಮಂಡೆ
ಹಲ್ಲುಕಿರಿವ ಆರ್ಭಟ
ಕೇಳುತಿಹುದು ಕಟಕಟ!
ಕಂಡಕಂಡವರನು ಹಿಡಿದು
ಬುಗ್ಗನೆಂದು ಊದಿ ಸಿಡಿದು
ಪ್ರಜ್ಞೆಗಿರಿಯು ಬೂದಿಗೈದು
ಶಾಂತ ಮನವ ಮೆಟ್ಟಿ ತುಳಿದು
ಎದೆಯನೊಡೆವ ಹೂಂಕಾರ
ಇದುವೆ ಇದುವೆ ಓಂಕಾರ
ಎಂದು ಕೂಗಿ ಸಾರುತಿದೆ
ತಿಂದು ತೇಗಿ ಚೀರುತಿದೆ.

೪

ಲಾಭ ಲಾಭ ಲಾಭವೆಂಬ
ಮಂತ್ರ ಕಲಿಸುತ
ಲೋಭವಿಹುದು ಜಗದ ತುಂಬ
ನೆಕ್ಕಿ ನೊಣೆಯುತ!

ಮನದ ನೆಲದ ಮಾಳಿಗೆ
ಆಯಿತಿದಕೆ ಒಪ್ಪಿಗೆ!
ಹಗಲು ಇರುಳು ಒಂದೆ ಲೆಕ್ಕ
ರೊಕ್ಕ ರೊಕ್ಕ ರೊಕ್ಕ ರೊಕ್ಕ!
ಗಾಸಿಗೊಂಡ ಹೆಣದ ಮೇಲೆ
ಹಣದ ಕುಣಿತ, ನೃತ್ಯಲೀಲೆ!
ತಿನ್ನಲೆಳಸೆ ನಾಲಿಗೆ
ಇಹುದು ಬರಿಯ ಜೋಳಿಗೆ!
ಕಲ್ಲಿಗಿಂತ ಕಠಿಣ ಎದೆ
ಜಲ್ಲಿಯಂತೆ ಚುಚ್ಚುತಿದೆ.
ಸತ್ತ ಗುಣಕೆ ಅಳುವ ಗೋಳು
ಝಣರು ಝಣರು ಸದ್ದು ಕೇಳು!
ಹಗಲು ಇರುಳು ಭೇತಾಳ
ಎದೆಯಲಿಂತು ಬಡಿಯೆ ತಾಳ
ನಿದ್ದೆಗಿಲ್ಲ ಆಸರ!
ಬುದ್ಧಿಗಿಲ್ಲ ಬೇಸರ!
ಎಲುಬುಗೂಡು ಸೆಟೆದು ಹಿಡಿಯೆ
ಬಿಡಿಸಿಕೊಂಡು ಬರುವುದರಿಯೆ
ಲೋಭಮುಷ್ಟಿ, ಕಪಿಯ ಮುಷ್ಟಿ
ಅಂಧಕಾರದೆಡೆಯ ದೃಷ್ಟಿ
ಎಲ್ಲ ವಿಫಲ!
ಎಲ್ಲ ವಿಫಲ!
ಹೋರುತಿಹುದು ನನ್ನೆದೆ
ಕಡೆಯತನಕ ತಪ್ಪದೆ!

೫

ದಾಹ! ದಾಹ! ಇದುವೆ ಮೋಹ!
ಪರಚುವಂತೆ ಬಹುದು ಆಹ!
ತಪ್ಪು ಸರಿಯೊ ಮುಚ್ಚುಮರೆಯೊ
ಯಾವುದಿಲ್ಲ ಇಲ್ಲಿ ಅರಿಯೊ,
ನರನ ಕಣ್ಣು ಇದಕೆ ಹಣ್ಣು
ಕಂಡ ಕಂಡ ಗಂಡು ಹೆಣ್ಣು
ಗುರಿಯನಿಡುವ ಗುರುತು ಏಟು
ಕೋವಿಯೆದೆಯ ಗುಂಡಿನೇಟು!
ಬೆಸ್ತನಂತೆ ಬಲೆಯ ಬೀಸಿ
ಹಿಡಿವನಣ್ಣ ಕೈಯ ಚಾಚಿ
ಮಾಟಗಾತಿ ಮಾಯೆ ಜೊತೆಗೆ
ಸುಳಿದುಬರಲು ನರನ ಬಳಿಗೆ
ಕಂಡು ಕಾಣದಂಥ ಕತೆಗೆ
ಕೇಳಿ ನಂಬದಂಥ ವೆತೆಗೆ
ಕೋಡು ಮೂಡಿ ಬೆಳೆವುದು
ನರನ ಪಾಡು ಮುಗಿವುದು.
ದೃಷ್ಟಿಯುದ್ಧ ಸಾಗಿದೆ,
ಎದ್ದು ಬಿದ್ದು ಜಗ್ಗದೆ!

೬

ಮದದ ಹೆಸರನೆಂತು ಮರೆವೆ?
ಪದದಲದನು ನುಡಿಯಲಳವೆ?
“ಮೂರು ಲೋಕ ಮುನಿಯಲೇಳು
ಇದಿರೆ ನನಗೆ? ಬೆದರೆ, ಕೇಳು”
ಎನುವ ಮಾತು ಮದದ ಸೂತ್ರ,
ಯುಕ್ತಿ, ಶಕ್ತಿ, ಸರ್ವತಂತ್ರ

ಎಲ್ಲ ಮದಕೆ ಬೆಂಬಲ
ಹೇಳಬೇಕೆ ಗೊಂದಲ!
ಸೊಕ್ಕಿನಮಲು ಮೇರೆ ಮಾರಿ
ಕುಣಿಯುತಿಹಳು ಹೆಮ್ಮೆ ಮಾರಿ!
ದೈತ್ಯಬಲದ ಕೆಚ್ಚ ನೆಚ್ಚಿ
ಸಾಗುತಿಹುದು ಕೊಚ್ಚಿಕೊಚ್ಚಿ
ನೆತ್ತಿ ಎತ್ತಿ ಮೆರೆಯಲೆಂದು
ಒತ್ತಿ ಒತ್ತಿ ತುಳಿಯಲೆಂದು
ಇಹುದು ಮದದ ಪದಗತಿ
ಹೆಜ್ಜೆಗೊಂದು ಅವನತಿ!
ತಪ್ಪಲಿನಿತು ಎಚ್ಚರ
ನನಗೆ ಸಾನೆ ಪಂಜರ!

೭

ಕಿಚ್ಚು! ಕಿಚ್ಚು! ಹೊಟ್ಟೆಕಿಚ್ಚು!
ಹೊಗೆಯೆ ಇರದೆ ಉರಿವ ಕಿಚ್ಚು!
ಇಲ್ಲ ಸದ್ದುಗದ್ದಲ
ಒಳಗೆ ಕೊರೆವ ಸಾವಲ!
ಕೆಡಕು ಬುದ್ಧಿ, ಕೆಟ್ಟ ನೋಟ,
ಇದುವೆ ಇದರ ಪಂಥದಾಟ!
ಹೆರರ ಹಿರಿಮೆ ಸಲ್ಲದಿದಕೆ
ಪರರ ಬೀಳು ಕೂಳು, ಬಯಕೆ.
ಕಪಟವೆತ್ತ ಬಾವುಟ!
ಕುಟಿಲ, ಮೋಸ, ಪಟುಭಟ!
ನಿತ್ಯನಿತ್ಯ ಎದೆಯ ಬಗೆದು
ಗೆದ್ದಲಂತೆ ಒಳಗೆ ಕೊರೆದು
ನನಗೆ ಸಾನೆ ಮೃತ್ಯುವಾಗೆ

ಲೋಕವೆಲ್ಲ ನಗುವ ಹಾಗೆ
ಕಳ್ಳಹೆಜ್ಜೆ ಇಡುತಿದೆ
ಕತ್ತ ಹಿಸುಕಿ ಕೊಲುತಿದೆ.
ಅಣ್ಣ ತಮ್ಮ ಅಕ್ಕ ತಂಗಿ
ಬಂಧುಬಳಗದೊಡಲ ನುಂಗಿ
ಭೇದ ಬೇರ ಬಿಡುತಿದೆ
ಒಂದೆ ಬದುಕು ಒಡೆದಿದೆ
ಚೂರು ಚೂರು ಎನ್ನದೆ
ತನಗೆ ತಾನೆ ಸಹಿಸದೆ!

೮

ಆರು ಮಂದಿ ಆರು ರೀತಿ
ದಾಳಿಯಿಡಲು ಕವಿಸಿ ಭೀತಿ
ಬಾಂಬು, ಮದ್ದು,
ಕೋವಿ ಸದ್ದು,
ಯಾವುದೊಂದು ನಡೆಯದಿಲ್ಲಿ
ಮನದ ಯುದ್ಧಭೂಮಿಯಲ್ಲಿ!
ನಿತ್ಯನಿತ್ಯ ಸೋಲು ಗೆಲುವು
ಒಂದೆ ಸಮನೆ ಸಾಗುತಿಹವು.
ಚಿತ್ತವಿರಲು ಚಲಿಸದೆ
ನನಗೆ ನೆರವು ನನ್ನದೆ!
ಅಳಿಯದಂಥ ಸಂಯಮ
ತಾಳಿ ಬಾಳ್ವ ಸಂಯಮ
ನೀಡಲೆನಗೆ ಬೆಂಬಲ
ಸಾಕು ನನಗೆ ಭುಜಬಲ!
ನಿತ್ಯನಿತ್ಯ
ಗೆದ್ದುಬರುವೆ!
ಸತ್ಯ ಸತ್ಯ
ಎದ್ದುನಿಲುವೆ!

ಜಡತನ

ತುಕ್ಕು ಹಿಡಿದಿದೆ ಬುದ್ಧಿಗೆ
ಸಿಕ್ಕಿ ಲೋಕದ ಜಡತೆಗೆ!

ಕಲಿತ ಗಣಿತವ ಎಣಿಸಿ ಗುಣಿಸುತ
ಕೂಡಿ ಕಳೆಯುತ ದಿನದಿನ
ಯಾವುದೋ ಗುರಿ ತಪ್ಪಿ ಸಾಗುತ
ದಿಕ್ಕುಗೆಟ್ಟದೆ ಈ ಮನ.

ದ್ರೋಹ, ವಂಚನೆ, ಸುಳ್ಳು, ಸೋಗನು
ಕಂಡು ಕಂಡೂ ಸಿಡಿದಿದೆ
ಪೊಳ್ಳುಮಾತಿನ ಬುರುಗು ಬೆರಗನು
ಕೇಳಿ ಕೇಳಿ ಕುಸಿದಿದೆ.

ನಿತ್ಯಜೀವನದೊಂದು ನಾಟಕ
ಸತ್ವವಿಲ್ಲದೆ ಸಾಗಿರೆ
ಮನುಜ ದನುಜರನೊಲಿಪ ಕಾಯಕ
ಎಂದು ಮುಗಿವುದೊ ಇಂತಿರೆ?

ಧ್ಯೇಯವಾದವೆ ಮಾಯವಾಯಿತೊ
ಎಂಬ ಶಂಕೆಗೆ ಸಿಲುಕಿದೆ.
ಬರಡು ಬಾಳಿಗೆ ಹುರುಪು ಹೆಚ್ಚಿತೊ
ಎಂಬ ಭಾವವೆ ಬಲಿದಿದೆ.

ನಡೆಯು ಮುನ್ನಡೆ ಕಡಿದು ಬಿದ್ದಿದೆ
ಪ್ರಗತಿ ಚಿಹ್ನೆಯೆ ಕಾಣದು
ಅಲ್ಪತೃಪ್ತಿಯ ತಲ್ಪಕೊರಗಿದೆ
ಮನಸು ಏತಕೊ ಮಿಡಿಯದು.

ನುಗ್ಗಿ ನಡೆಯುವ ನೀರ ನೆರೆಯನು
ಅಡ್ಡಗಟ್ಟಿದ ಹಾಗಿದೆ.
ಸುತ್ತಿ ಸುಳಿಯುವ ಗಾಳಿಮರಿಯನು
ಕಟ್ಟಿಹಾಕಿರುವಂತಿದೆ.

ಸಾಕುಸಾಕೀ ಉಭಯಸಂಕಟ
ಇನ್ನು ತಿಳಿಯಿತು ಜಡತನ!
ಇಂದು ಬಿಡುಗಡೆ! ಇಂದು ಬಿಡುಗಡೆ!
ಕೊಡವಿ ಎದ್ದಿದೆ ಚೇತನ!

ದುರಂತ

ದಿನದಿನ ನಡೆದಿಡೆ ಅನಂತ ದುರಂತ !
 ಕೇಳಿದ ಕೂಡಲೆ ಮೈ ನಡುಗುವುದು !
 ನೆನೆ ನೆನೆದರೆ ಮನ ತಲ್ಲಣಿಸುವುದು !

ಎಲ್ಲಿಯೊ ಹತ್ತಿತು ಉರಿಯಿತು ಬೆಂಕಿ !
ಸತ್ತವರೆನಿತೋ ತಿಳಿಯದು ಅಂಕಿ !
ಬುಳುಬುಳು ಮುಳುಗಿತು ದೊಡ್ಡ ಹಡಗು
ಹುಡುಕುತಲಿರುವರು ಜಲಧಿಯ ಒಳಗು !
ಅಂತರಿಕ್ಷದಿ ಸುಳಿವ ವಿಮಾನ
ಉರುಳಿತು ಉಲ್ಕಾಪಾತ ಸಮಾನ !
ದೂರವ ಹಂಗಿಸಿ ಓಡುವ ರೈಲು
ಇದ್ದಕ್ಕಿದ್ದೊಲು ತಪ್ಪಿತು ಸರಳು !
ನೀರಲಿ ಮುಳುಗಿತು ಸೇತುವೆ ಮುರಿದು
ಸತ್ತವರೆನಿತೋ ಹೇಳಲು ಬರದು !
 ಈ ಪರಿ ನಡೆದಿವೆ ವಿವಿಧ ದುರಂತ !
 ಏನಿದರರ್ಥವೊ ಓ, ಭಗವಂತ !

ಬದುಕಿಗು ಸಾವಿಗು ಕೂದಲಿನಂತರ
ಎವೆ ಮುಚ್ಚುವುದರಲೆನಿತು ಅವಾಂತರ ?
 ಕ್ಷಣಮಾತ್ರದಿ ಹೆಣವುರುಳುವುದು
 ಮೃತ್ಯುವಿನೋಲಗ ಮೆರೆಯುವುದು !

ಅಕಾಲಮರಣದ ದಾರುಣ ಚಿತ್ರ
ಊಹಿಸತೊಡಗಲು ಮುಗಿವುದು ನೇತ್ರ !
ನಿಟ್ಟುಸಿರಲಿ ಎದೆ ಕುದಿವುದು ಕರಗಿ
ಗೋಳಿನ ಕರೆ ಕೇಳುತಲಿದೆ ಮೊಳಗಿ !

ಎಲ್ಲಿಗೊ ತೆರಳಿದ ಜನರ ಸಮೂಹ
ಯಮವಶವಾಯಿತು ಇಂಗಲು ದಾಹ!
ಹೆಣವಾದರು ತಾಯ್, ಶಿಶು ಬಿಟ್ಟಿಲ್ಲ.
ಮಗುವೊಂದೇ ಉಳಿದಿದೆ ದಿಕ್ಕಿಲ್ಲ!
ನವದಂಪತಿಗಳು ಶವವಾಗಿಹರು
ಮನೆಮಂದಿಯು ಹಸೆಕೆಯು ಹೊತ್ತವರು.
ಜರ್ಜರ ದೇಹದ ಜರೆ ಬಂದವರು
ಗುರುತಿಸಲಾಗದೆ ರೂಪಳಿದಿಹರು.
ಮಿರುಮಿರುಗುವ ಯುವಕನ ಮುಖದಲ್ಲಿ
ಕಳೆ ಉಳಿದಿದೆ ಗೆಲುವಿನ ನಗೆಯಲ್ಲಿ.
ಕೆಂಪೇರಿಹ ಮುಗುದೆಯು ಸಿರಿ ಕೆನ್ನೆ
ಬಲು ಬಾಡಿದೆ! ಸಾವಪ್ಪಲು ಸೊನ್ನೆ!
ಹೆಣವಾದರು ಹಣವನು ಬಿಡೆನೆಂದು
ಧನ ಹೊತ್ತಿಹ ದಣಿ ಕೆಡೆದಿಹನಿಂದು.
ಮೈಮೇಲಿನ ಆಭರಣಗಳೆಲ್ಲ
ಒಡೆಯನ ಕೈಬಿಟ್ಟಿವೆ, ನೆನಪಿಲ್ಲ.
ಕೆದರಿದ ತಲೆ, ಪುಡಿಯಾಗಿಹ ಮೂಳೆ,
ಬಾಗಿದ ಬೆನ್, ಕೈಕಾಲ್ಗಳು ಜೋಲೆ
ಎರಡಾಗೊಡೆದಿದೆ ತಲೆಗಳ ಚಿಪ್ಪು
ಕಣ್ಗುಡ್ಡೆಯೊ ಬೆಳಗದ ಮಸಿಕಪ್ಪು!
ಎತ್ತೆತ್ತಲು ಕೆನ್ನೀರು,
ನೆಣ, ಮಾಂಸದ ಕೊಳೆನೀರು!

ಇದೊ! ಹುಡುಕಾಡುವ ಈ ಜನರಾರು?
ಅದೊ! ಸುಳಿದಾಡುವ ಆ ಜನರಾರು?
ಕೈನೀಡುವ ಕರುಣಾಳುಗಳಾರು?
ಕೈದೋಚುವ ಬರಿ ಕಪಟಿಗಳಾರು?

ಯಾರೊಬ್ಬರ ಯಾಗೂ ತಿಳಿದಿಲ್ಲ!
ಯಾರಿಗೆ ಯಾವಾಸೆಯೊ ಗೊತ್ತಿಲ್ಲ!
ಕಾಣದವೊಲು ಬರಿ ನೆರಳುಗಳಂತೆ
ಆರಿದು ಸುಳಿವರು ಮರುಳುಗಳಂತೆ!
ಸಾಯುದ ಜನಗಳು ಗಾಯದಿ ನೊಂದು
ಕಂಡಕಂಡವರ ಬಂಧುಗಳೆಂದು
ಬಲು ಮೊರೆಯಿಡುವರು ಕೈಚಾಚಿ
ನೆರವಾಗದ ನರನು ಪಿಶಾಚಿ!

ಕಂಬಿಯು ತಪ್ಪಿದ ರೈಲಿನ ತೆರದಿ
ಬದುಕಿನ ಗತಿ ತುಸು ತಪ್ಪಿದ ಭರದಿ
ಸಾವಪ್ಪಿಹ ಶತ ಸಾಸಿರ ಜನರೆ
ಭೂಲೋಕದ ಸಂಸಾರದ ಜನರೆ
ನಿಮಗಿದೊ ಎದೆ ಮುಡಿಪು!
ಕಣ್ಣೀರಿನ ನೆನಪು!

ಬಂದಿ

೧

ಏನು ಇದು ನೋಟ !
ದಿನದಿನವು ಒಂದೆ ಸಮ ಕರುಳಿರಿವ ನೋಟ !
ಅತ್ತಿತ್ತ ಪೋಲೀಸು ಕಾವಲು !
ನಡುವೆ ನರನೊಬ್ಬ ನೋಡಲು !
ಇವನೊಬ್ಬ ಬಂದಿ.
ಇಹರೇನು ಅತ್ತುಕರೆಯುವ ಮಂದಿ ?
ದೃಢಕಾಯ ಕಪ್ಪುವಿರುಗುವ ಬಣ್ಣ
ಉದ್ದ, ಭೂಷಣ, ಗಾತ್ರ, ಎಲ್ಲ ಇಹುದಣ್ಣ
ಉಟ್ಟ ಬಟ್ಟೆಯು ಕೂಡ ಅಚ್ಚುಕಟ್ಟು
ಹಣೆಯೊಳಗೆ ಇಟ್ಟಿಹನು ವಿಭೂತಿಯ ಬೊಟ್ಟು.
ಇಂದಿವನ ಬಾಳು
ನಾಯಿ ನರಿಗಿಂತ ಕೀಳು !

೨

ಮತ್ತೆ ಅದೆ ನೋಟ !
ಎದೆಯಿರಿವ ನೋಟ !
“ ಇವನೊಬ್ಬ ಬಂದಿ
ಇಹರೇನು ಅತ್ತುಕರೆಯುವ ಮಂದಿ ? ”
ಉತ್ತರವನಿತ್ತಿಹುದು ಈ ದಿನದ ಸರದಿ
ಕಣ್ಣು ಕತ್ತಲಿಕ್ಕುವ ತೆರದಿ
ಅತ್ತಿತ್ತ ಪೋಲೀಸು ಕಾವಲು
ನಡುಬೀದಿಯಲಿ ಇವ ಸಾಗಲು !

ಖೈದಿ ಸಾಗಿಹನು ಮುಂದೆ
ಮನೆಮಂದಿ ಬರುತಿಹರು ಹಿಂದೆ!
ಐದು ವರುಷದ ಕಂದ
ಏನೇನು ತಿಳಿಯದಿಹ ಕಂದ
ಖೈದಿ ಕೈಹಿಡಿದಿಹನು!
(ತಪ್ಪಾಯ್ತು ಮನ್ನಿಸಿರಿ
ತಂದೆ ಕೈಹಿಡಿದಿಹನು!
ಅವನೇನು ಬಲ್ಲ
ತಂದೆ ಹೊತ್ತಿಹ ಹೊಲ್ಲ?)
ದುಃಖ ಮಡುಗಟ್ಟಿರುವ ಸಪ್ಪೆ ಮುಖವನು ಹೊತ್ತು
ಹಿಂದೆ ಬರುತಿಹರು ಮನೆಯವರು ಅತ್ತು ಅತ್ತು.
ಹೆತ್ತೊಡಲು ಕುದಿಯುತಿಹ ತಾಯಿ
ಅತ್ತತ್ತು ನಿಟ್ಟುಸಿರ ಬಿಡುತಿಹುದು ಬಾಯಿ.
ಕೈಹಿಡಿದ ಹೆಣ್ಣು
ಅತ್ತತ್ತು ಊದಿಹುದು ಕಣ್ಣು.
ಅಕ್ಕತಂಗಿಯರ ನೋವು
ಕೊರೆಕೊರೆವ ಮಂಜು ಸಾವು.
ಹೆಜ್ಜೆಯಿಕ್ಕುವ ಕಂದ ನಡೆವ ಚೆಂದವೆ ಚೆಂದ
ಏನು ಅರಿಯದ ಹಸುಳೆ! ತಂದೆ ಕೈಹಿಡಿದಿಹನು ಕಂದ!
ಮನೆ ಬಿಟ್ಟ ಮಾನವನ ಮಮತೆ ಕೈಬಿಡಲಿಲ್ಲ.
ಖೈದಿಯೆದೆ ಎಂತಿಹುದೊ ಭಗವಂತ ಬಲ್ಲ.
ಸಾಗಿಹುದು ಮೆರವಣಿಗೆ
ಕೋರ್ಟನೆಡೆಗೆ!
ಕಟ್ಟಕಡೆಗೆ!
ತುತ್ತತುದಿಗೆ!

೩

ಕದ್ದವನೊ ? ಸಿಕ್ಕಿಬಿದ್ದವನೊ ?
ಹಣ್ಣು ತಿಂದವನೊ ? ಸಿಪ್ಪೆ ತಿಂದವನೊ ?
ಇತ್ಯರ್ಥವಾಗಲಿದೆ ಇಂದು.
ಸತ್ಯ ಬದುಕಿಹುದೆ ಬಂಧು ?

ಸಹೃದಯನಿಗೆ

ಬಾರ ಬಳಿಗೆ, ಎದೆಯ ತಡಿಗೆ
  ಒಂದೆ ಮನದ ಸಹೃದಯ !
ಒಂದೆ ಜೀವ, ಬೇರೆ ತೊಡಿಗೆ,
  ಬಾರ ಬಳಿಗೆ ಸಹೃದಯ !

ನೀನೆ ಎನ್ನ ಆಪ್ತಬಂಧು !
ನೀನೆ ಎನಗೆ ದಯೆಯ ಸಿಂಧು !
ಎನ್ನ ಎದೆಗೆ ನೀನೆ ಮಧುಪ !
ಎನ್ನ ಸಿರಿಗೆ ನೀನೆ ಸುರಪ !
  ಬಾರ, ಬಂದು ಕಾದಿದೆ !
  ಉಂಡು ತಣಿಯಲೆಂದಿದೆ !

ಒಂದು ನಭಕೆ ನೂರು ತಾರೆ
  ಹುಟ್ಟಿ ಹೊಳೆವ ಪರಿಯಲಿ,
ಒಂದು ಗಿಡಕೆ ನೂರು ಹೂವು
  ಬಿಟ್ಟು ತೊನೆವ ತೆರದಲಿ,
ಒಂದು ಕೃತಿಗೆ ನೂರು ಮಂದಿ
  ಬಂಧುಬಳಗ ಬೆಳೆಯಲಿ.
ಒಂದು ನುಡಿಯ ಕುಡಿಯು ಹೊಮ್ಮಿ
  ತೋಟವೆದ್ದು ನಿಲ್ಲಲಿ !

ಒಕ್ಕಲು

ಭೂದೇವಿಯ ಒಕ್ಕಲು !
ಪ್ರಾಣಿಕೋಟಿ ಸಸ್ಯಕೋಟಿ
ವಿವಿಧ ವಿಹಗ, ವಿವಿಧ ಕೀಟ
ಎಲ್ಲ ಭೂದೇವಿಯ ಒಕ್ಕಲು !
ಸೂರ್ಯ, ಚಂದ್ರ, ಕೋಟಿ ತಾರೆ
ಅಗ್ನಿ, ಅನಿಲ, ನೀರಧಾರೆ,
ಭೂದೇವಿಯ ಸುತ್ತಲು
ನಿತ್ಯ ಇಹವು ಕಾವಲು !
ಆದಿ ಅಂತ್ಯ ಇಲ್ಲದಂತೆ
ಉಬ್ಬಿ ಹಬ್ಬಿ ದಿಗ್ದಿಗಂತ
ಉಂಡೆಯಂತೆ ದಂಡೆಯಂತೆ
ಚೆಂಡಿನಂತೆ ಗುಂಡಿನಂತೆ
ಗುಂಡಗಿಹುದು ಮೇದಿನಿ !
ಸುತ್ತುತಿಹುದು ಧಾರಿಣಿ !
ತಾಯಿ ತಿರೆಗೆ ಇರದು ಭೇದ
ಕಾಯುತಿರುವುದೊಂದೆ ಮೋದ
ಅಣು ಮಹತ್ತು ಎಂಬುದಿಲ್ಲ
ತೃಣವೊ ಕಣವೊ ಒಂದೆ ಎಲ್ಲ
ಅಮೀಬದಿಂದ ತಿಮಿಯವರೆಗೆ
ಕೀಟದಿಂದ ಗಜದವರೆಗೆ
ಎಲ್ಲ ಭೂದೇವಿಯ ಒಕ್ಕಲು !
ಎಲ್ಲ ಭೂದೇವಿಯ ಮಕ್ಕಳು !

ಧರಣಿಗಾಗೆ ವರುಷ ವರುಷ
ಪ್ರಾಣಿಕೋಟಿ ಬೆಳೆಯೆ ನಿಮಿಷ

ಬೆಟ್ಟ, ಗುಡ್ಡ, ಕವುರಿ, ಕಣಿವೆ,
ವನದ ಮಧ್ಯೆ, ಮೃಗದ ನಡುವೆ,
ನದಿಯ ದಡದಿ, ಗಿರಿಯ ತಟದಿ,
ಬೆಚ್ಚನಿರುವ ಎಡೆಯ ಕೆಲದಿ,
ಎಲೆಯ ಹೊದ್ದು ನಿದ್ದೆಗೈದು
ಕಾಡುಮೇಡುಗಳಲಿ ಅಲೆದು
ಮೃಗದ ಜೊತೆಗೆ ಮೃಗದ ತೆರದಿ
ಬೆಳೆಯುತಿದ್ದ ಮನುಜ ಭರದಿ.
ಗಂಡು ಹೆಣ್ಣು ಎರಡೆ ಭೇದ
ಅಲೆತವೊಂದೆ ಬಾಳ ವೋದ!
ಸಾಗಿತಿಂತು ಜೀವನ
ನರನ ಮೊದಲ ಜೀವನ!

ಎಂದೊ ಏನೊ ತಿನ್ನತೊಡಗೆ
ಸಲ್ಲದೊಂದು ಹಣ್ಣಕೊಡುಗೆ
ಅಮವು ಮೂಡಿತದಗೊ ನೋಡು
ಬುದ್ಧಿಬಲದ ಹಿರಿಯ ಕೋಡು!
ನರನಿಗಾಯ್ತು ಚಿಂತನ
ಹೊಚ್ಚ ಹೊಸದು ಸ್ಪಂದನ!
ಮೊಟ್ಟಮೊದಲು ಹೊಳೆದುದೇನೊ!
ಹೆಸರ ಹುಚ್ಚು ಹಿಡಿಯಿತೇನೊ?
ತನ್ನದೆನುವ ಬುದ್ಧಿ ಬಲಿಯೆ
ಎಂತು ನುಡಿವುದೆಂದು ಕೊರೆಯೆ
ಅತ್ತ ಇತ್ತ ಸುತ್ತಮುತ್ತ
ಕಂಡ ಕಂಡ ಹೆಸರಿಡುತ್ತ
ನರನ ಮನಸು ಸಾಗಿತೆ?
ಲೋಕ ಹೆಸರ ಪಡೆಯಿತೆ?

ಪ್ರಾಣಿಕೋಟಿ ಸಸ್ಯಕೋಟಿ
ಬೇರೆ ಬೇರೆ ಹೆಸರ ಥಾಟ
ಪಡೆಯೆ, ಇದಕೆ ಇಲ್ಲ ಸಾಟಿ!
ಹೆಸರನಿಡುವ ಹುಚ್ಚು ನಾಟ
ಆಯಿತಿಂತು ವಿಭಜನ
ವಿವಿಧ ವರ್ಗಭೇದನ!
ಪ್ರಾಣಿಗುಂಟೆ ಹೆಸರ ಬಯಕೆ?
ಕೂಗಿ ಕರೆಯೆ ಗೊತ್ತೆ ಅದಕೆ?
ಸಸ್ಯಕುಂಟೆ ಹೆಸರ ಬಯಕೆ?
ಬೆಳೆಯುದೇನು ಅದರ ವೊಳಕೆ?
ತಿಂದು ತೇಗಿ ಕೊಂದು ಕೂಗಿ
ಬದುಕಿ ಬಾಳ್ವುದೊಂದೆ ಸಾಗಿ
ಇದುವೆ ಪ್ರಾಣಿಜೀವನ!
ಬೇರೆ ಇಲ್ಲ ಚಿಂತನ!

ಬುದ್ಧಿಬಲದ ಬಲವೆ ಬಲವು
ನರನ ಶಕ್ತಿ ಬೆಳೆಯೆ ದಿನವು
ದೇಹಬಲಕೆ ಜಗ್ಗದಂತೆ
ಕ್ರೂರತನಕೆ ಸಗ್ಗದಂತೆ
ಯುಕ್ತಿಬಲದ ಬಲೆಯ ಬೀಸಿ
ಧರೆಯ ಉದ್ದ ಕೈಯ ಚಾಚಿ
ಹಿರಿಮೆಗಾಯ್ತು ಪೀಠಿಕೆ
ಆಯ್ತು ಲೋಕದಾಳ್ವಿಕೆ.

ಸ್ವಾರ್ಥದಾಶೆ ಬೆಳೆಯುತೊಡಗೆ
ಹೆಸರನಿಡುವ ಹುಚ್ಚು ಕಲೆಗೆ
ಮೇರೆ ಇಲ್ಲದಾಯಿತೆ?
ಕೊಂಬು ಕೋಡು ಬೆಳೆಯಿತೆ?

ನರನ ಮೆಟ್ಟನಿಂತಿತೆ ?
ಜುಟ್ಟು ಹಿಡಿದು ನಕ್ಕಿತೆ ?
ಕಂಡ ಕಂಡ ಹೆಸರನಿಟ್ಟು
ಭೂಮಿಯೊಡಲ ಹಂಚಿಕೊಟ್ಟು
ಒಟ್ಟು ಬೆಳೆದ ಮಂದಿಯೆಲ್ಲ
ಬೇರೆ ಬೇರೆ ಬೆಳೆಯುತೆಲ್ಲ
ವರ್ಣಭೇದ, ರೀತಿಭೇದ,
ದೇಶಭೇದ, ವೇಷಭೇದ,
ವಿವಿಧ ಭೇದಗಳನು ಬಿತ್ತಿ
ದೂರವಾದರೇನೊ ಒತ್ತಿ ?
ಒಂದೆ ತಾಯ ಮಕ್ಕಳು
ಒಡೆದರಿಂತು ಒಕ್ಕಲು !

ವರುಷ ವರುಷವುರುಳಲು
ಸ್ವಾರ್ಥದಾಹ ಬೆಳೆಯಲು
ಮೊದಲ ನಂಟು ಮರೆಯಲು
ಗುರುತು ಅಳಿಸಿಹೋಗಲು
ದ್ವೇಷ ಮನೆಯತೊಡಗಿತು
ಕತ್ತಿ ಹರಿತವೆನಿಸಿತು.
ಖಡ್ಗ ಹಿಡಿದುನಿಂತರು
ಹರಿಯತೊಡಗೆ ನೆತ್ತರು
ಕೊಂದು, ಪೆಟ್ಟು ತಿಂದರು.
ಜನಜನಾಂಗ ಸತ್ತರು !
ಒಂದೆ ಮನೆಯ ಮಕ್ಕಳು
ಮಡಿದು ಮಣ್ಣು ಮುಕ್ಕಲು
ತಿರೆಯ ಎದೆಯು ಕರಗಿ ಕರಗಿ
ಹಗಲು ಇರುಳು ಅತ್ತು ಕೊರಗಿ

ಉಸಿರು ಕೂಡ ಸೊರಗಿ ಸೊರಗಿ
ಮುಖವೆ ಬಾಡಿದಂತೆ ಮರುಗಿ
ಸುರಿದಳೇನೊ ಕಣ್ಣ ನೀರು
ಸುತ್ತಲಿಹುದು ಉಪ್ಪು ನೀರು
ಇದುವೆ ಕ್ಷಾರವಾರಿಧಿ,
ಇಳೆಯ ದುಃಖತೋಯಧಿ!

ನಿಮಿಷದೂತರು

ಬನ್ನಿ ಬನ್ನಿರಿ ನಿಮಿಷದೂತರೆ
ಏನ ತಂದಿರಿ ಹೇಳಿರಿ?
ಬಾಳಿನೇಳಿಗೆ ನಿಮ್ಮ ಕೈಲಿರೆ
ಏನು ಮಾಡಲಿ ನುಡಿಯಿರಿ?

ಕ್ಷಣದ ಬದುಕಿಗೆ ಗುಣವ ನೀಡುವ
ಪರುಷಮಣಿಯೇ ನೀವಲಾ!
ಸುಖದ ದುಃಖದ ಸವಿಯ ತೋರುವ
ನೀತಿನಿಪುಣರು ನೀವಲಾ!

ಸೂರ್ಯಚಂದ್ರರ ನಿತ್ಯ ನಲಿಸುವ
ಕಾಲಪುರುಷನ ಮಕ್ಕಳೆ!
ಇಹದ ಬಾಳಿನ ಅವಧಿ ಗುಣಿಸುವ
ಲೆಕ್ಕನಿಪುಣರು ಐಸಲೆ!

ಹೊನ್ನು ಹೆಸರಿನ ಹುಚ್ಚ ಹಿಡಿಸದೆ
ಆತ್ಮತೃಪ್ತಿಯ ನೀಡಿರಿ.
ಮನುಜ ಜನ್ಮದ ಮಹಿಮೆ ಮಾಸದೆ
ನಿಮ್ಮ ಮಹಿಮೆಯ ತೋರಿರಿ.

ಗುಟ್ಟ ಬಲ್ಲಿರಿ! ಮಟ್ಟಬಲ್ಲಿರಿ!
ಮೆರೆಸಬಲ್ಲಿರಿ ಮೆಚ್ಚಲು!
ವ್ಯರ್ಥವಾಗದೆ ಬದುಕ ಬೆಳಗಿರಿ
ಇನಿತೆ ನನ್ನೆದೆ ಹಂಬಲು!

ಗಾನ

ಯಾವ ನುಡಿಯಾದರೆನಗೇನು ?
ಯಾವ ದನಿಯಾದರೆನಗೇನು ?
ಗಾಯಕನೆ, ಕುಣಿಸಿ ತಣಿಸು.

ಗಾನಯಾನಕೆ ಒಡೆಯ ನೀನು
ನಲಿದೊಲಿವ ಯಾತ್ರಿಕನು ನಾನು
ಸುಖ ದುಃಖ ಬಾಳ ಶ್ರುತಿಯು.

ನೀ ನುಡಿವ ಗಾನಧಾರೆಯಲಿ
ತಾಯಿಜೋಗುಳದ ಹಿತವಿರಲಿ
ತನುಮನಕೆ ಇಂಬುಗೊಡಲಿ.

ನಾಗಸ್ವರಕೆ ಫಣಿ ಮೆಚ್ಚಿ
ತೂಗಿ ತೊನೆಯುವುದು ಹೆಡೆ ಬಿಚ್ಚಿ
ತನ್ನ ಕ್ರೌರ್ಯವನು ಮರೆತು.

ದನಿಗೊಡಲು ಗೋವಳನ ಕೊಳಲು
ಗೋವುಗಳೆ ಕೇಳುವುವು ಎನಲು
ಅಂತು ನೀ ಪಾಡಿ ಒಲಿಸು.

ಕಾಲದೇಶಗಳ ಗಡಿ ಮೀರಿ
ಮೆರೆಯುತಿರೆ ಗಾನ ಸಿರಿ ಬೀರಿ
ಗಾಯಕನೆ, ನೀನೆ ಗುರುವು !

ಯಾವ ನುಡಿಯಾದರೆನಗೇನು ?
ಯಾವ ದನಿಯಾದರೆನಗೇನು ?
ಗಾಯಕನೆ, ಕುಣಿಸಿ ತಣಿಸು.

ಎಂತು ?

ಒಲಿಯದವರನು ಒಲಿಸುವುದು ಎಂತು ?
ಕಲಿಸಿರ್ೖೆ ಕಲಿಸಿ ನೀವ್ ಕಲಿತುದೆಂತು ?

ದುಷ್ಟ ಮೃಗಗಳ ತಂದು ಶಿಷ್ಟತನವನು ಕಲಿಸಿ
  ನೀನೆಂತು ಪಳಗಿಸುವೆ ಆಟಗಾರ ?
ದುಷ್ಟ ಮನುಜರನೊಲಿಸಿ ಇಷ್ಟಮಿತ್ರರು ಎನಿಸಿ
  ನಾನೆಂತು ಪಳಗಿಸಲಿ ಹೇಳು ಬಾರ.

ಮದಗಜದ ಸೊಕ್ಕಿಳಿಸಿ ಹೆಗಲೇರಿ ಕುಳಿತಿರುವ
  ಮಾವಟಿಗ, ಎಂತು ನೀನಿದನು ಕಲಿತೆ ?
ಮದಿಸಿ ಬಲು ಮಲೆತಿರುವ ಮನುಜರನು ಒಲಿಯಿಸುವ
  ಚದುರತನವನು ಅರಿಯೆ, ಎಂಥ ಕೊರತೆ ?

ಕಾಳಸರ್ಪವ ಕುಣಿಸಿ ಬಾಳು ಸಾಗಿಸುತಿರುವ
  ಎಲೆಲೆ ಹಾವಾಡಿಗನೆ, ನೀನೆ ನಿಪುಣ.
ಒಳಗೊಳಗೆ ಕುದಿಕುದಿದು ವಿಷ ಕಾರಿ ನೋಯಿಸುವ
  ನರರ ನಲಿಸುವುದೆಂತು ಹೇಳು ಜಾಣ ?

ಚಾಟಿ ಏಟನು ಒಲ್ಲೆ, ಅಂಕುಶವ ತಿವಿಯಲೊಲ್ಲೆ
  ಪುಂಗಿದನಿ ಮಾಯೆಯನು ಮೆಚ್ಚಲೊಲ್ಲೆ
ಮನುಜರನು ಮನುಜಮಾರ್ಗದಿಂದಲೆ ಗೆಲ್ಲೆ
  ದಾರಿ ತೋರಿರಿ ನೀವು ಕಲಿಯಬಲ್ಲೆ.

ಚಿತ್ರದುರ್ಗ

೧

ಇದೊ ಚಿತ್ರದುರ್ಗ !!
ಇದೊ ಚಿತ್ರದುರ್ಗ !
ಹೆಸರನೆತ್ತಿದ ಒಡನೆ
ನವಿರೇಳುವುದು ಒಂದೆ ಸಮನೆ !
ಏಳು ಸುತ್ತಿನ ಕೋಟೆ ನೆನಪು
ಅಚ್ಚಳಿಯದಿಹ ಮುಡಿಪು !
ಗಂಡುಗಲಿಗಳು ಗುಂಡಿಗೆಯ ರಕ್ತವನು ಸುರಿಸಿ
ಗಂಡೆದೆಯ ಗುಡುಗಿನಾರ್ಭಟದಿ ಹೋರಾಟವನು ನಡೆಸಿ
ಕತ್ತಿಮಿಂಚಿನಲಿ ಮೃತ್ಯುದೇವತೆಯ ಕುಣಿಸಿ
ಮದ್ದು, ಸಿಡಿಗುಂಡುಗಳ ಸುರಿಸಿ
ರಣದೇವತೆಗೆ ರಸದೌತಣವನುಣಿಸಿ
ಕಲಿತನದ ಕೊಡೆಯೆತ್ತಿ
ನೆಲದಿ ಛಲವನೆ ಬಿತ್ತಿ
ಕಟ್ಟಿದರು ಅಂದು !
ಬಾಳಿದರು ಅಂದು !

೨

ಪ್ರಕೃತಿದೂತರು ಗಡಿಯ ಕಾಯುತಿರುವೋಲು
ಊರ ಸುತ್ತಲು ಇಹವು ಗುಡ್ಡಗಳ ಸಾಲು !
ನಭದೆಡೆಗೆ ಕೈಚಾಚಿರುವ ಬೆಟ್ಟಗಳ ಕೋಡು
ಚಿತ್ರದುರ್ಗದ ಚಿತ್ರವೈಭವಕೆ ಒಂದು ಕೋಡು.
ಹಿಂಡು ಗಜ ಮಲಗಿದೊಲು ಬಂಡೆಗಳ ಹಿಂಡು !
ದಂಡಿಳಿದು ಬೀಡುಬಿಟ್ಟಂತಿಹವು ಕಗ್ಗಲ್ಲ ಗುಂಡು !

ಭೀಮನೀ ಎಡೆಯಲ್ಲಿ ಓಡಾಡಿದನು ಎಂದು
ಹೇಳುವರು ಹೆಮ್ಮೆಯಲಿ ಊರವರು ಇಂದು.
ಆ ಹಿಡಿಂಬನನು ವಧಿಸಿ
ಆ ಹಿಡಿಂಬೆಯನು ವರಿಸಿ
ಒಲುಮೆ ಬಲುಮೆಗಳ ಮೆರೆಯಿಸಿದ ಬೀಡು
ಭೀಮನಿಗು ಎದೆ ಕರಗಿಸಿದ ನಾಡು!
ಭರಮಪ್ಪ, ತಿಮ್ಮಣ್ಣ, ವೀರ ಮದಕರಿಯು
ಒಬ್ಬೊಬ್ಬ ನಾಯಕರು ಆಳಿ ಬಾಳ್ದೆಡೆಯು!
ಒಂದೊಂದು ಹೆಸರು
ಕೆಚ್ಚಿನುಳಿಯಲಿ ಕೆತ್ತಿರುವ ಹೆಸರು!

೩

ಏಳು ಸುತ್ತಿನ ಕೋಟೆ!
ಪಾಳು ಬಿದ್ದಿಹ ಕೋಟೆ!
ಎಡೆಬಿಡದೆ ಕಥೆ ಹೇಳುತಿದೆ ಕರೆದು
ಕಲಿತನದ ಮಹಿಮೆಯನೆ ಮೊರೆದು!
ಅಡಿಯಿಂದ ಮುಡಿವರೆಗೆ ಇಡುಕಲ್ಗಳನೆ ನಿಲಿಸಿ
ಗೋಡೆ ಕಟ್ಟಿಹರಿಲ್ಲಿ ಕಂಡಕಂಡವರ ಬೆರಗುಗೊಳಿಸಿ.
ಆಳಿನೆತ್ತರ ಮೀರಿ, ಬಾನಿನೆತ್ತರಕೇರಿ
ಕತ್ತಿನೆತ್ತರದ ನೋಟದವಧಿಯು ಮೀರಿ
ಸಾಗಿಹುದು ಸಾಲು ಸಾಲು
ಮಾನವನ ಸಾಹಸದ ಪಾಲು!
ತೋಳ್ಬಲಕೆ ಭುಜಬಲಕೆ
ಅಕ್ಕಪಕ್ಕದ ನೆಲಕೆ
ಬದುಕೆಲ್ಲವನು ಮೀಸಲಿಟ್ಟು
ಹೋರಾಡಿದರು ಜೀವದಾಸೆಯನೆ ಬಿಟ್ಟು!
ಹೈದರನ ಹೆದರಿಸುತ

ಟಿಪ್ಪುವನು ತಿಣಿಕಿಸುತ
ಕಾದಾಡತೊಡಗಿದರು
ಕನಲಿ ಕಿಡಿಗಾರಿದರು
ಕಟ್ಟಕಡೆವರೆಗೆ
ತುತ್ತತುದಿವರೆಗೆ.
ಒನಕೆ ಕಂಡಿಯು ಚಂಡಿ
ಓಬವ್ವಗಿಲ್ಲ ಸಮದಂಡಿ!

೪

ಮೊರೆಮೊರೆಯುತಿದೆ ಗಾಳಿ
ಬಿರುಗಾಳಿ ರೂಪವನು ತಾಳಿ!
ಕಲ್ಲುಕಲ್ಲಿನಲಿ ಸೊಲ್ಲು
ಕೇಳಿಬರುತಿಹುದು ಎಲ್ಲೆಲ್ಲು!
ತಲೆದೂಗುತಿರೆ ಗುಡಿಯು ಸಂಪಿಗೆಯು ಗಿಡವು
ಕಾಲ ಹಿಂದುರುಳುವುದು ಒಂದೊಂದು ಚಣವು!
ಹೆಜ್ಜೆಹೆಜ್ಜೆಗು ನೆನಪು
ನಿಟ್ಟುಸಿರ ಮುಡಿಪು!
ಅರಮನೆಯೊ, ನೆಲಮನೆಯೊ,
ಕೋಟೆಗೋಡೆಗಳ ತೆನೆಯೊ,
ಕೊತ್ತಲವೊ, ಕಂದಕವೊ,
ಹುಲಿಮುಖವೊ, ಕದವೊ
ಗುಡ್ಡಗುಡ್ಡಗಳ ಗುಡಿಯೊ,
ಬತ್ತಿ ಬಾಡಿರುವ ದೊಣೆಯೊ
ಕಲ್ಲುಗಳ ಗರಡಿಮನೆಯೊ
ಕಣಜಗಳ ನೆಲೆನೆಲೆಯೊ
ಛಲಕೆ ಛಲವೆದ್ದು
ಹೋರಾಡಿ ಬಿದ್ದು

ಮಣ್ ಮುಕ್ಕುವಂತಿಹವು!
ಕಣ್ ಕುಕ್ಕುವಂತಿಹವು!
ಪಾಳಿನಲಿ ಬೀಳಿನಲಿ
ಎಲೆಯಿರದ ಗಿಡಗಳಲಿ
ಕಲ್ಲುಮುಳ್ಳುಗಳಲ್ಲಿ
ಕಳ್ಳಿಬೇಲಿಗಳಲ್ಲಿ
ವೈಭವದ ಪ್ರೇತಗಳು ನೈ ಪರಚುವಂತೆ
ಮರುಳಾಗಿ ನೆರಳಾಗಿ ಸುಳಿಯುತಿರುವಂತೆ
ಹೊಂಡಗಳ ಎದೆ ತೆರೆದು
ಬಂದಬಂಡವರ ಮುಖ ತಿವಿದು
ಚೀರುತಿವೆ ಇಲ್ಲಿ
ಶಾಪವನು ಚೆಲ್ಲಿ!
ಗೋಳು ಗದ್ದುಗೆಯನೇರಿ
ಆಳತೊಡಗಿಹುದು ಸಾರಿ!
ಶಬ್ದವನು ಮೆಟ್ಟನಿಂತಿಹ ಮೌನ
ಬಂಡೆಬಂಡೆಗಳಂತೆ ಘನಿಸಿ ಬಿದ್ದಿಹ ಮೌನ
ಸೇವೆಗೈಯುತಿದೆ ಸೊಂಟ ಕಟ್ಟಿ
ಬಂದವರ ಉಸಿರು ಕಟ್ಟಿ.
ಗುಡಿಗುಡಿಯ ಗಾಢಾಂಧಕಾರ
ಗವಿಗವಿಯ ಘೋರಾಂಧಕಾರ
ಕತ್ತಲೆಯ ಕೊಡುಗೆ
ಗೋಳು ದಣಿಗೆ!
ಬಾವಲಿಯು ಬಾವುಟವ ಕಟ್ಟಿ
ಜೇಡಗಳು ತೋರಣವ ಕಟ್ಟಿ
ಕೀಟಗಳು ಕಿವಿಯ ಕೊರೆದು
ಸೇವೆಗೈಯುತಿವೆ ಮಣಿದು!
ಬಂಡೆ ಬಂಡೆಗಳ ಬಿರುಕು

ಹಲ್ಕಿರಿವ ಥಳಕು !
ಪಾಳುಬಿದ್ದಿಹ ಪೌಳಿ
ಗೋಳು ತಲೆಗಿಟ್ಟ ಮೌಳಿ !

೫

ಇದು ಚಿತ್ರದುರ್ಗ !
ಇದು ಚಿತ್ರದುರ್ಗ !
ಮರಳಿ—
ಮುಖವರಳಿ
ಆಗದೇ ಗೆಲುವು
ಎದ್ದೇಳೆ ಜನವು
ದುಡಿಯೆ ದಿನದಿನವು ?

ಮುಳುಗಿದ ಹಡಗು

ಮುಳುಮುಳುಗಿತೊಂದು ಹಡಗು
ಬಹು ದೊಡ್ಡ ಹಡಗು !
ಇರುಳ ನೆರಳಿನಲಿ ಸದ್ದಿರದ ಸಿಡುಗು
ಬಡಿದು ಕೆಡೆದಿತ್ತು ಹಡಗು !

ಮನೆಮಂದಿಗೆಲ್ಲ ನಡುಕ
ದಡವ ಸೇರುವತನಕ.

ಬಂಧುಬಳಗಗಳೆಂಬ ಕೊಂಬೆ ಕೊಂಬೆ
ನಡುಗಿದವು ಬುಡವೆ ನಡುಗೆ
ಗುಂಪುಗುಂಪಿರುವ ಗೆಳೆಯರಿಗೆ ಏನೆಂಬೆ
ತಂಪೆರದ ಸವಿನೇಹ ಅಡಗೆ.

ಸರಳಸೌಜನ್ಯಗಳು ಎರಕ ಹೊಯ್ದಂತೆ
ಮರುಕ ಮಮತೆಯಲಿ ಎದೆಯು ಬೆಸೆದಂತೆ
ಮಾತುಮಾತಿನಲಿ ಮನವ ತೆರೆದಂತೆ
ಸಂಸಾರಮಧ್ಯದಲಿ ಸಂನ್ಯಾಸ ಕೊಂಡಂತೆ
ದೇಹಗಾತ್ರವ ಮೀರಿ ಔದಾರ್ಯ ಬೆಳೆದಂತೆ
ಇಂತು ಬಾಳ್ದಿರಿ ನೀವು !
ಎಂತು ಮರೆವುದು ನಾವು ?

ನೂರಾರು ನೋವುಗಳ ನಗುನಗುತ ಸಹಿಸಿ
ತಾಳಿ ಬಾಳದಿರಿ ನೀವು.
ಹಿರಿಯರನು ಕಿರಿಯರನು ಊರವರನೊಲಿಸಿ
ನಕ್ಕು ನಲಿಸಿದಿರಿ ನೀವು.

ನುಡಿನುಡಿಯು ಸವಿಜೇನು !
ಮನವೊ ನೀಲಿಯ ಬಾನು !

ಹೊತ್ತು ಹೋಗದೆ ಹೊತ್ತು ಕಳೆದವರಲ್ಲ
ಮುತ್ತು ಮಾಣಿಕಕು ಮಿಗಿಲು.
ದರ್ಪದಲಿ ಕರುಣೆ ಸ್ಮರಣೆಯ ಮರೆತವರಲ್ಲ
ದಾನಧರ್ಮದಲಿ ಮೊದಲು.
ಬಾಳ ಗುರಿ ಬಾಯ್ಬಿಟ್ಟು ಹೇಳಿದವರಲ್ಲ
ನಡೆನಡೆಯು ಆದರ್ಶ!
ತಿಳಿವು ತುಂಬಿದ ಕೊಡವು, ತುಳುಕಿದವರಲ್ಲ
ಮಾತುಮಾತಿಗು ಹರ್ಷ!

ಹಡಗಿನಂದದ ಬದುಕು!
ಮನೆಯ ಹಿರಿಬೆಳಕು!
ಆಯ್ತು ಶ್ರೀಹರಿಗೆ ಮುಡಿಪು.
ನಮಗೆ ಚಿರ ನೆನಪು.

ಕನ್ನಡ ನಾಡು

ಕನ್ನಡದ ಜನ ಒಂದು, ಕನ್ನಡದ ಮನ ಒಂದು,
ಇಂದು ಕನ್ನಡದ ನಾಡೆಲ್ಲ ಒಂದು !

ಕಾವೇರಿ ತುಂಗಭದ್ರೆಯರೊಲಿದು ಹರಸುತಿರೆ
ಬೆಟ್ಟಗುಡ್ಡಗಳೆಲ್ಲ ಪುಳಕಗೊಳಲು
ಹಸುರು ಗಿಡಗಳು ತೂಗಿ, ಹಕ್ಕಿ ಹಾಡುಲಿಯುತಿರೆ,
ನಂದನವೊ ಕನ್ನಡದ ಜನರ ಹೊಳಲು.

ಮೂಲೆಮೂಲೆಯ ಬಂಧುಗಳು ಒಂದುಗೂಡಿರಲು
ಎಲ್ಲೆಲ್ಲು ನಗೆಯ ಹೊಂಬೆಳಕ ಲೀಲೆ.
ಕನ್ನಡದ ಜನರೆಲ್ಲ ಮುನ್ನಡೆದು ಬರುತಿರಲು
ಹೆಜ್ಜೆಹೆಜ್ಜೆಗು ತಾಯ್ಗೆ ವಿಜಯಮಾಲೆ.

ಭಾರತಾಂಬೆಯ ಮಗಳೆ, ಓ, ಕನ್ನಡಿಗರೊಡತಿ !
ನಿನ್ನ ಮಕ್ಕಳು ನಾವು ಕೋಟಿ ಕೋಟಿ
ಕವಿ, ಗಮಕಿ, ವಾದಿ, ವಾಗ್ಮಿಗಳು ನಿನ್ನ ಕೀರುತಿ
ಬೀರಿ ಮೆರೆಸುವೆವು ನಿನಗಿಲ್ಲ ಸಾಟಿ.

ಕನ್ನಡದ ಕವಿಗಳಿರ! ಕನ್ನಡದ ಕಲಿಗಳಿರ !
ನಿಮ್ಮ ಹರಕೆಯ ನೀಡಿ ಒಂದುಗೂಡಿ.
ಸೂರ್ಯ, ಚಂದಿರ, ತಾರೆ, ಲೋಕದೇವತೆಗಳಿರ !
ನಿಮ್ಮ ನೆರವಿರಲಿ, ಕಣ್ತೆರೆದು ನೋಡಿ.

ಪುನರ್ಜನ್ಮ

ಪುನರ್ಜನ್ಮ ಪುನರ್ಜನ್ಮ ಪುನರ್ಜನ್ಮ ಪಡೆಯಿತು!
ಹರಿದು ಹಂಚಿ ಹೋದ ನಾಡು ಮತ್ತೆ ಒಂದಾಯಿತು!

ಕನ್ನಡದ ನಾಡ ಕನಸು
ಸತ್ಯವಾಯಿತು!
ಕನ್ನಡದ ಜನರ ಮನಸು
ಒಂದುಗೂಡಿತು!
ಕನ್ನಡದ ಮೂಲೆಯೆಲ್ಲ
ಮಾಲೆಯಾಯಿತು!
ಕನ್ನಡದ ತಾಯಿಗೆಲ್ಲ
ಲೀಲೆಯಾಯಿತು!

ನದಿಗಳೆಲ್ಲ ನೀರನೆರೆಯೆ
ಮಲೆಗಳೆಲ್ಲ ಮುಗುಳ ಮುಡಿಯೆ
ತಾಯಿ ನಗುತಿರೆ.
ಮಂದಪವನ ಗಂಧ ನೀಡೆ
ಹಕ್ಕಿಗೊರಲು ಹಾಡ ಹಾಡೆ
ಬೆಳಕು ಬೆಳಗಿರೆ
ಜನಸಮೂಹಗೈವ ಘೋಷ
ವೇದಘೋಷ ಕಡಲಘೋಷ
ಮೀರಿ ಮೆರೆದಿರೆ
ಕನ್ನಡದ ನಾಡ ಹಾಸ
ಮತ್ತೆ ಮಿಂಚಿದೆ!

ದಿಕ್ಕು ದಿಕ್ಕು ದಿಕ್ಕಿನಲ್ಲಿ
ಮುಗಿಲ ತೋರಣ!

ವನವನಂಗಳೆಡೆಗಳಲ್ಲಿ
ಬಳ್ಳಿಕಾವಣ!
ವಿವಿಧ ಬಗೆಯ ಹೂವು ಚೆಲ್ಲಿ
ತನಗೆ ತಾನೆ ರಂಗವಲ್ಲಿ
ಹಾಕಿದಂತಿದೆ!
ಹಚ್ಚಹಸುರು ಹರುಷ ಹೊದೆದು
ಹಿಮದ ಮಣಿಯ ಸೇಸೆ ತಳೆದು
ಒಸಗೆಯಾಗಿದೆ!

ಹಿರಿಯರಿತ್ತ ಹರಕೆ ಹೊತ್ತು
ಗೆದ್ದು ಬಂದಿದೆ!
ಹೆಗಲ ಮೇಲೆ ಹೊಣೆಯ ಹೊತ್ತು
ಎದ್ದು ಬಂದಿದೆ!
ರಾಷ್ಟ್ರಚತುರರೆದೆಯ ತೊಳೆದು
ಕವಿಗೆ ಅಭಯವಾಣಿ ಮೊರೆದು
ಹಿಂದಿನವರನೆಲ್ಲ ನೆನೆದು
ಇಂದಿನವರನೆಲ್ಲ ಕರೆದು
ನಾಡು ಮೂಡಿದೆ!

ಮಹಾಕಾವ್ಯಗಳನು ಬರೆದ
ಮಹಾಕವಿಗಳು
ಕನ್ನಡದ ನಾಡ ಪೊರೆದ
ಮಹಾಕಲಿಗಳು
ಶಿಲ್ಪದಿಂದ ಶಿಲೆಯ ನಗಿಸಿ
ಗೀತದಿಂದ ಕಲೆಯ ನಿಲಿಸಿ
ಚಿತ್ರಗಳಲಿ ನೇತ್ರ ತಣಿಸಿ
ಮೆರೆದ ಕುಶಲರು

ಅಂವ್ಯಕ್ತವಾಗಿ ಹರಸಿ
ಹೊಗಳುತಿರುವರು.

ಪುನರ್ಜನ್ಮ ಪಡೆದ ನಾಡು
ದಿವಿಗು ಮಿಾರಿದೆ.
ಕಾಡು ಮೇಡು ಬೀಡು ಬೀಡು
ಹುರುಪುಗೊಂಡಿದೆ.
ಪುನರ್ಜನ್ಮ ಪಡೆದವೋಲು
ಕಂನ್ನಡದ ಜನರ ಸಾಲು
ಮುದವನಾಂತಿದೆ.
ಒಡೆದ ಮಂದಿ ಒಟ್ಟುಗೂಡಿ
ನಡೆವ ಬೆಡಗ ನೋಡಿ ನೋಡಿ
ನೇಹ ನಲಿದಿದೆ!

ತೇರನೆಳೆಯೆ ಎಲ್ಲ ಬನ್ನಿ
ಇದು ರಥೋತ್ಸವ!
ಒಲುಮೆ ಬಲುಮೆ ಎಲ್ಲ ತನ್ನಿ
ಇದು ಮಹೋತ್ಸವ!
ಅಣ್ಣ ತಮ್ಮ ಅಕ್ಕ ತಂಗಿ
ಒಂದೆ ಮನೆಯಲೆಲ್ಲ ತಂಗಿ
ಇನ್ನು ಬಾಳುವ!
ಹೆಜ್ಜೆ ಹೆಜ್ಜೆ ಹೆಜ್ಜೆಯಿಟ್ಟು
ಒಂದೆ ಗುರಿಗೆ ಮನವನಿಟ್ಟು
ಇನ್ನು ಸಾಗುವ!

ನಾಡಿ ನಾಡಿ ನಾಡಿಯಲ್ಲಿ
ಮಿಡಿಯೆ ಕನ್ನಡ

ಉಸಿರು ಉಸಿರು ಉಸಿರಿನಲ್ಲಿ
ಸುಳಿಯೆ ಕನ್ನಡ
ಅದುವೆ ಅನ್ನ! ಅದುವೆ ಚಿನ್ನ!
ಎಲ್ಲ ಕನ್ನಡ!
ಇದುವೆ ಚಿನ್ನ! ಇದುವೆ ರನ್ನ!
ನಮ್ಮ ಕನ್ನಡ!

ಉಷಾ ಪ್ರೆಸ್, ಮೈಸೂರು

ಇದೇ ಲೇಖಕನ ಇತರ ಕೃತಿಗಳು

ಗದ್ಯ

ಶ್ರೀ ಪುರಂದರದಾಸರು ಮತ್ತು ಅವರ ಕೀರ್ತನೆಗಳು

ಸೀತಾಪರಿತ್ಯಾಗದ ಸಮಸ್ಯೆಗಳು

ಕಲಿ ಕರ್ಣ

ಮಹಾಸತಿ

ಅಳಿಯದೇವರು

ಪದ್ಯ

ತೋರಣ

ಓಬವ್ವ

ಶಿಶು ಸಾಹಿತ್ಯ

ಬುಡುಬುಡುಕೆ

ತೊಟ್ಟಿಲು